ANANTHKUMAR
PRATISHTHANA

# ಅನಂತಪಥ

ಪುಟ 6
ವ್ಯಕ್ತಿ ವಿಶೇಷ ಮಾಲಿಕೆ
ಮಹಾರಾಣಿ ರುದ್ರಮದೇವಿ



ಸಂಪುಟ - 6 ಮಾರ್ಚ್- 2026 ಸಂಚಿಕೆ - 69

# ದೂರದೃಷ್ಟಿಯ ಅನಂತ ಪಥ

## ಅನಂತಕುಮಾರ್ ಅವರ ದೃಷ್ಟಿ ಮತ್ತು ಕಾರ್ಯಪದ್ಧತಿ



ರಾಜಕೀಯದಲ್ಲಿ ನಾಯಕತ್ವ ಎನ್ನುವುದು ಕೇವಲ ಅಧಿಕಾರ ಚಲಾಯಿಸುವ ಹಕ್ಕಲ್ಲ; ಅದು ಜನಸಾಮಾನ್ಯರ ಬದುಕನ್ನು ಹಸನು ಮಾಡುವ ಒಂದು ದೂರದೃಷ್ಟಿಯ ಕಾರ್ಯಪದ್ಧತಿ. ಸಂಕಷ್ಟದ ಸಮಯದಲ್ಲಿ ಸೇವೆ ಅವಿರತವಾಗಿ ಸಾಗಿದಾಗ ಮಾತ್ರ ನಾಯಕನ ಆಶಯಗಳಿಗೆ ಸಾರ್ಥಕತೆ ಲಭಿಸುತ್ತದೆ. ಈ ದೃಷ್ಟಿಕೋನದಿಂದ ವಿಶ್ಲೇಷಿಸಿದಾಗ, ಅನಂತಕುಮಾರ್ ಅವರ ನಾಯಕತ್ವವು ಕೇವಲ ಆಡಳಿತಕ್ಕಷ್ಟೇ ಸೀಮಿತವಾಗದೆ, ಸಮಾಜದ ನಾಡಿಮಿಡಿತವನ್ನು ಅರಿತು ಸ್ಪಂದಿಸುವ ಒಂದು ಜನಾನುರಾಗಿ ಆಶಯವಾಗಿ ಮಾರ್ಪಟ್ಟಿರುವುದು ಸ್ಪಷ್ಟವಾಗುತ್ತದೆ.

**ಎಲ್‌ಪಿಜಿ ಅಭಾವ: ಸಂಕಷ್ಟದ ನೈಜ ಚಿತ್ರ**:ಇಂದಿನ ಜಾಗತಿಕ ವಿದ್ಯಮಾನಗಳ ನಡುವೆ ಎಲ್‌ಪಿಜಿ ಸಿಲಿಂಡರ್‌ಗಳ ಅಭಾವವು ದೇಶಾದ್ಯಂತ ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ. ಮಧ್ಯಪ್ರಾಚ್ಯದ ಭೌಗೋಳಿಕ ಸಂಘರ್ಷಗಳು ಇಂಧನ ಸರಬರಾಜಿನಲ್ಲಿ ತಂದೊಡ್ಡಿರುವ ಏರುಪೇರುಗಳು, ಸಾಮಾನ್ಯ ಗೃಹಿಣಿಯರಿಂದ ಹಿಡಿದು ಸಣ್ಣ ಉದ್ದಿಮೆದಾರರವರೆಗೆ ಎಲ್ಲರ ಅಡುಗೆಮನೆಯನ್ನು ಅಸ್ತವ್ಯಸ್ತಗೊಳಿಸಿವೆ. ಇಂತಹ ಸಂದರ್ಭಗಳಲ್ಲೇ ವ್ಯವಸ್ಥೆಗಳ ಬಲ, ಯೋಜನೆಯ ದೂರದೃಷ್ಟಿ ಮತ್ತು ನಾಯಕತ್ವದ ನಿಜವಾದ ಮೌಲ್ಯ ಹೊರಹೊಮ್ಮುತ್ತದೆ.

**ಅದಮ್ಯ ಚೇತನ: ದೂರದೃಷ್ಟಿಯ ಜೀವಂತ ಮಾದರಿ:** 1997ರಲ್ಲಿ ಶ್ರೀಮತಿ ಗಿರಿಜಾ ಶಾಸ್ತ್ರಿ ಅವರ ಪ್ರೀತಿಯ ನೆನಪಿನಲ್ಲಿ ಸ್ಥಾಪಿತವಾದ ಅದಮ್ಯ ಚೇತನ ಫೌಂಡೇಶನ್, 2003ರಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಮಧ್ಯಾಹ್ನದ ಬಿಸಿಯೂಟ ಯೋಜನೆ ಘೋಷಿಸಿದ ಕ್ಷಣದಿಂದ ಶಾಲಾ ಮಕ್ಕಳಿಗೆ ಪೌಷ್ಟಿಕ ಊಟ ನೀಡುವ ಪಣ ತೊಟ್ಟಿತು. ಇಂದು ಬೆಂಗಳೂರು, ಹುಬ್ಬಳ್ಳಿ, ಕಲಬುರಗಿ ಮತ್ತು ರಾಜಸ್ಥಾನದ ಜೋಧ್‌ಪುರದಲ್ಲಿ ಪ್ರತಿದಿನ ಸುಮಾರು 1.60 ಲಕ್ಷ ಮಕ್ಕಳಿಗೆ ಬಿಸಿಯೂಟ ತಲುಪಿಸುತ್ತಿದೆ — ಒಂದೇ ಒಂದು ಎಲ್‌ಪಿಜಿ ಸಿಲಿಂಡರ್ ಬಳಸದೆ.

2009ರಿಂದ ಜಾರಿಗೆ ತಂದ ಈ ಶೂನ್ಯ ಅನಿಲ ಮಾದರಿಯಲ್ಲಿ ಪ್ರತಿದಿನ ಸುಮಾರು 120 ಸಿಲಿಂಡರ್‌ಗಳ ಉಳಿತಾಯವಾಗುತ್ತಿದೆ. ಇದರ ಬದಲಾಗಿ ಬ್ರಿಕೆಟ್ಸ್, ಬಯೋಮಾಸ್ ಸ್ಟೌವ್, ತೆಂಗಿನ ಚಿಪ್ಪು ಮತ್ತು ಬಯೋಗ್ಯಾಸ್ ಬಳಸಲಾಗುತ್ತಿದೆ. ಈ ಅಡುಗೆ ಮನೆಯನ್ನು 'ಕಸಮುಕ್ತ, ಹೊಗೆಮುಕ್ತ ಮತ್ತು ಸಿಲಿಂಡರ್ ಮುಕ್ತ' ಅಡುಗೆ ಮನೆ ಎಂದೇ ಕರೆಯಲಾಗುತ್ತದೆ. ಬ್ರಿಕೆಟ್ಸ್ ಹಾಗೂ ಬಯೋಗ್ಯಾಸ್ ಬಳಸಿ ಪರಿಸರಸ್ನೇಹಿ ಅಡುಗೆಮನೆಯನ್ನು ನಿರ್ಮಿಸಿರುವುದು ನಾಯಕತ್ವದ ದೂರದೃಷ್ಟಿಗೆ ಸಾಕ್ಷಿ. ಅಡುಗೆ ತ್ಯಾಜ್ಯದಿಂದ ಬಯೋಗ್ಯಾಸ್, ಬೂದಿಯಿಂದ ಇಟ್ಟಿಗೆ ತಯಾರಿಸುವ ಈ 'ಶೂನ್ಯ ತ್ಯಾಜ್ಯ' (Zero Waste) ಮಾದರಿಯು ಭಾರತದ ಇಂಧನ ನೀತಿಗೆ ದಿಕ್ಸೂಚಿಯಾಗಿದೆ.

**ನೋವಿನಿಂದ ಉದ್ಭವಿಸಿದ ದೃಷ್ಟಿ:** ಬಾಲ್ಯದಲ್ಲಿಯೇ ಬಡತನ ಮತ್ತು ದುಬಾರಿ ಆರೋಗ್ಯ ವ್ಯವಸ್ಥೆಯ ಕಹಿ ಅನುಭವವನ್ನು ಕಂಡ ಅನಂತಕುಮಾರ್ ಅವರು, ಸಾಮಾನ್ಯ ಜನರ ಸಂಕಷ್ಟವನ್ನು ಹತ್ತಿರದಿಂದ ಅರಿತಿದ್ದರು. ಒಂದೇ ಸಾರಿ ಔಷಧಗಳನ್ನು ಖರೀದಿಸಲು ಸಾಧ್ಯವಾಗದೆ ಒಂದೊಂದೇ ಮಾತ್ರೆಯನ್ನು ಕೊಳ್ಳಬೇಕಾದ ಪರಿಸ್ಥಿತಿ — ಇದು ಕೇವಲ ಒಂದು ಕುಟುಂಬದ ಕಥೆಯಲ್ಲ; ಅದು ಲಕ್ಷಾಂತರ ಭಾರತೀಯರ ದೈನಂದಿನ ವಾಸ್ತವ. ಈ ನೋವಿನ ಅನುಭವವು ಅವರಲ್ಲಿ ಒಂದು ದಿಟ್ಟ ಪ್ರಶ್ನೆಯನ್ನು ಹುಟ್ಟಿಸಿತು. ನೋವಿನಿಂದ ಉದ್ಭವಿಸಿದ ಈ ದೃಷ್ಟಿಕೋನವೇ ಮುಂದೆ ಜನೌಷಧಿಯಂತಹ ಮಹಾನ್ ಯೋಜನೆಗಳಿಗೆ ಭದ್ರ ಬುನಾದಿಯಾಯಿತು."



**ದೃಷ್ಟಿಯಿಂದ ವ್ಯವಸ್ಥೆಗೆ: ಜನೌಷಧಿ ಕ್ರಾಂತಿ**

ಈ ಚಿಂತನೆಯಿಂದಲೇ ಅವರು ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ (PMBJP) ಯೋಜನೆಯನ್ನು ಪುನರುಜ್ಜೀವನಗೊಳಿಸಿ ಅದನ್ನು ಒಂದು ಜನಚಳವಳಿಯನ್ನಾಗಿ ರೂಪಿಸಿದರು. ಒಂದು ಕಾಲದಲ್ಲಿ ಮೂಲೆಗುಂಪಾಗಿದ್ದ ಈ ಯೋಜನೆಗೆ ಹೊಸ ಜೀವ ತುಂಬಿ, ದೇಶದಾದ್ಯಂತ ಸಾವಿರಾರು ಜನೌಷಧಿ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಅಗ್ಗದ ದರದಲ್ಲಿ ಗುಣಮಟ್ಟದ ಔಷಧಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಿದರು. ಲಕ್ಷಾಂತರ ಕುಟುಂಬಗಳು ಆರೋಗ್ಯ ವೆಚ್ಚದಲ್ಲಿ ಮಹತ್ತರ ಉಳಿತಾಯ ಕಂಡವು. ಇದು ಕೇವಲ ಒಂದು ಯೋಜನೆಯಲ್ಲ, ಬದಲಿಗೆ ಸಮಸ್ತ ಜನತೆಯ ಆರೋಗ್ಯ ಮತ್ತು ಆರ್ಥಿಕ ಭದ್ರತೆಯನ್ನು ಕಾಯುವ ದಿವ್ಯ ದೃಷ್ಟಿಯ ಸಾಕಾರ ರೂಪ.

**ರೈತರಿಗಾಗಿ ವ್ಯವಸ್ಥಾತ್ಮಕ ಬದಲಾವಣೆ**

ಆರೋಗ್ಯ ಕ್ಷೇತ್ರದಂತೆ ಕೃಷಿ ಕ್ಷೇತ್ರದಲ್ಲಿಯೂ ಅನಂತಕುಮಾರ್ ಅವರು ಶಾಶ್ವತ ಪರಿಹಾರಗಳನ್ನು ಹುಡುಕಿದರು. 2015ರಿಂದ ದೇಶಾದ್ಯಂತ ಶೇ.100ರಷ್ಟು ಬೇವು ಲೇಪಿತ ಯೂರಿಯಾ ಜಾರಿಗೊಳಿಸಿ, ರಸಗೊಬ್ಬರ ದುರ್ಬಳಕೆ ಮತ್ತು ಕಾಳಸಂತೆ ನಿಯಂತ್ರಿಸಿದರು. ಕಡಿಮೆ ಯೂರಿಯಾದಿಂದ ಹೆಚ್ಚಿನ ಇಳುವರಿ, ಭೂಮಿಯ ಗುಣಮಟ್ಟ ಸುಧಾರಣೆ, ಅಂತರ್ಜಲ ಸಂರಕ್ಷಣೆ ಇವೆಲ್ಲವೂ ಈ ನೀತಿಯ ಫಲಿತಾಂಶಗಳು. ಅವರು ಸಮಸ್ಯೆಯನ್ನು ತಾತ್ಕಾಲಿಕವಾಗಿ ಮುಚ್ಚಿಡಲಿಲ್ಲ; ವ್ಯವಸ್ಥೆಯನ್ನೇ ಬದಲಿಸಿದರು.

ಪುಟ 4 ರಲ್ಲಿ ಮುಂದುವರಿದಿದೆ

# ಗ್ರಾಮ ಚೇತನ: ತಳಮಟ್ಟದ ನಾಯಕತ್ವದಿಂದ ರಾಷ್ಟ್ರನಿರ್ಮಾಣದ ದಾರಿ




ಭಾರತದ ಪ್ರಜಾಪ್ರಭುತ್ವದ ಬೇರುಗಳು ಇರುವುದು ಗ್ರಾಮಗಳಲ್ಲಿ. ಈ ಬೇರುಗಳು ಗಟ್ಟಿಯಾಗಬೇಕಾದರೆ ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಸಮರ್ಥ ನಾಯಕತ್ವದ ಅಗತ್ಯವಿದೆ. ಈ ಬಲವನ್ನು ಗಟ್ಟಿಗೊಳಿಸುವ ಜವಾಬ್ದಾರಿ ಗ್ರಾಮಪಂಚಾಯತಿಗಳ ಮೇಲೆ ನಿಂತಿದೆ. ಸ್ವಾತಂತ್ರ್ಯಾನಂತರ ಅಧಿಕಾರವು ಕೇವಲ ರಾಜಧಾನಿಗಳಲ್ಲಿ ಸೀಮಿತವಾಗದೆ, ಹಳ್ಳಿಯ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು ಎಂಬ ಉದ್ದೇಶದಿಂದ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂತು. ಈ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶೇ. 50 ರಷ್ಟು ಮೀಸಲಾತಿ ನೀಡಿರುವುದು ಸಾಮಾಜಿಕ ಬದಲಾವಣೆಗೆ ಮಹತ್ವದ ಹೆಜ್ಜೆಯಾಗಿದೆ. ಆದರೆ ಕೇವಲ ಅಧಿಕಾರ ದೊರೆತರೆ ಸಾಕಾಗುವುದಿಲ್ಲ; ಅದನ್ನು ಸಮರ್ಥವಾಗಿ ಬಳಸುವ ನಾಯಕತ್ವ ತಳಮಟ್ಟದಲ್ಲಿ ರೂಪುಗೊಳ್ಳಬೇಕಾಗಿದೆ.

ಈ ಅಗತ್ಯತೆಯನ್ನು ಮನಗಂಡು ಅನಂತಕುಮಾರ್ ಪ್ರತಿಷ್ಠಾನವು 'ಗ್ರಾಮ ಚೇತನ - ನೇತೃತ್ವ ವಿಕಸನ ಶಿಬಿರ' ಎಂಬ ಕಾರ್ಯಕ್ರಮದ ಮೂಲಕ ಗ್ರಾಮೀಣ ಮಹಿಳಾ ಪ್ರತಿನಿಧಿಗಳು ಮತ್ತು ಗ್ರಾಮೀಣ ಭಾಗದ ಮಹಿಳೆಯರಿಗೆ ನಾಯಕತ್ವದ ಗುಣಗಳನ್ನು ಬೆಳೆಸುವ ಸಾರ್ಥಕ ಪ್ರಯತ್ನವನ್ನು ಕೈಗೊಳ್ಳುತ್ತಾಬಂದಿದೆ. ವಿವಿಧ ತರಬೇತಿ ಶಿಬಿರಗಳ ಮೂಲಕ ಈ ಉಪಕ್ರಮವು ಯಶಸ್ವಿಯಾಗಿ ಮುಂದುವರಿಯುತ್ತಿದ್ದು, ಗ್ರಾಮೀಣ ಮಹಿಳೆಯರಲ್ಲಿ ಹೊಸ ಆಶಾವಾದವನ್ನು ಮೂಡಿಸುತ್ತಿದೆ.

'ಗ್ರಾಮ ಚೇತನ' ಶಿಬಿರವು ಪಂಚಾಯತಿರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ದೊರೆತಿರುವ ಅವಕಾಶವನ್ನು ಕೇವಲ ಪ್ರತಿನಿಧಿತ್ವದ ಮಟ್ಟಕ್ಕೆ ಸೀಮಿತಗೊಳಿಸದೇ, ಅವರ ಸಹಜವಾದ "ಸರ್ವಜನ ಹಿತಾಯ, ಸರ್ವಜನ ಸುಖಾಯ" ಮನೋಭಾವವನ್ನು ಆಡಳಿತದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ದಿಕ್ಕಿನಲ್ಲಿ ಮಾರ್ಗದರ್ಶನ ನೀಡುತ್ತದೆ. ಮಹಿಳೆಯರಲ್ಲಿ ಅಡಗಿರುವ ನಾಯಕತ್ವ ಸಾಮರ್ಥ್ಯವನ್ನು ಹೊರತಂದು, ಅದಕ್ಕೆ ತಾತ್ವಿಕ ಹಾಗೂ ಪ್ರಾಯೋಗಿಕ ನೆಲೆಯನ್ನು ಒದಗಿಸುವುದು ಇದರ ಮುಖ್ಯ ಆಶಯವಾಗಿದೆ.

ಶಿಬಿರದಲ್ಲಿ ಮಹಿಳಾ ನಾಯಕತ್ವ, ಗ್ರಾಮದ ಇತಿಹಾಸ, ಪರಿಸರ ಸಂರಕ್ಷಣೆ, ಸಂವಹನ ಕೌಶಲ, ಆರೋಗ್ಯ, ನೈರ್ಮಲ್ಯ, ಕೃಷಿ ಮತ್ತು ಆರ್ಥಿಕ ಸ್ವಾವಲಂಬನೆ ಮುಂತಾದ ಪ್ರಮುಖ ವಿಷಯಗಳ ಕುರಿತು ಸಮಗ್ರ ತರಬೇತಿ ನೀಡಲಾಗುತ್ತದೆ. ಇದರಿಂದ ಗ್ರಾಮೀಣ ಮಹಿಳೆಯರು ತಮ್ಮ ಪಾತ್ರವನ್ನು ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಂಡು, ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸಲು ಸಜ್ಜಾಗುತ್ತಾರೆ.

ಮಹಿಳೆಯರ ನಾಯಕತ್ವವು ಕೇವಲ ಒಂದು ಸ್ಥಾನವಲ್ಲ; ಅದು ಒಂದು ಹೊಣೆಗಾರಿಕೆ. ಕುಟುಂಬವನ್ನು ಸಮರ್ಪಕವಾಗಿ ನಿರ್ವಹಿಸುವ ಮಹಿಳೆಯರು, ಸಮುದಾಯದ ಹಿತದೃಷ್ಟಿಯಿಂದ ಗ್ರಾಮವನ್ನು ಮುನ್ನಡೆಸುವ ಸಾಮರ್ಥ್ಯವನ್ನು ಸಹಜವಾಗಿಯೇ ಹೊಂದಿರುತ್ತಾರೆ. ಈ ಸಹಜ ಗುಣಗಳಿಗೆ ಸೂಕ್ತ ದಿಕ್ಕನ್ನು ನೀಡುವ ಮೂಲಕ, ಆಡಳಿತವನ್ನು ಸೇವೆಯಾಗಿ ಪರಿವರ್ತಿಸುವ ದಾರಿಯನ್ನು ಈ ಶಿಬಿರ ತೋರಿಸುತ್ತದೆ.

ಗ್ರಾಮದ ಇತಿಹಾಸದ ಅರಿವು ಮತ್ತು ಅದರ ಬಗ್ಗೆ ಅಭಿಮಾನವು ಗ್ರಾಮಾಭಿವೃದ್ಧಿಗೆ ಪ್ರಮುಖ ಅಂಶವಾಗಿದೆ. ಇಂದಿನ ಕಾಲದಲ್ಲಿ ಗ್ರಾಮೀಣ ಭಾಗದ ಪ್ರತಿಭೆಗಳು ನಗರಗಳತ್ತ ವಲಸೆ ಹೋಗುತ್ತಿರುವ ಒಂದು ಪ್ರಮುಖ ಕಾರಣ ತಮ್ಮ ನೆಲದ ಬಗ್ಗೆ ಇರುವ ಅಭಿಮಾನದ ಕೊರತೆ. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಮಾತಿನ ತಾತ್ಪರ್ಯವನ್ನು ಮನವರಿಕೆ ಮಾಡುವ ಮೂಲಕ, ತಮ್ಮ ಗ್ರಾಮದ ವೈಶಿಷ್ಟ್ಯಗಳನ್ನು ಅರಿತು ಅದನ್ನು ಅಭಿವೃದ್ಧಿಪಡಿಸುವ ಮನೋಭಾವವನ್ನು ಶಿಬಿರ ಬೆಳೆಸುತ್ತದೆ.

ಪರಿಸರ ಸಂರಕ್ಷಣೆ ಇಂದಿನ ಕಾಲದ ಅನಿವಾರ್ಯತೆಯಾಗಿದೆ. ಹವಾಮಾನ ವೈಪರೀತ್ಯ, ಅಂತರ್ಜಲ ಮಟ್ಟದ ಕುಸಿತ, ತ್ಯಾಜ್ಯ ನಿರ್ವಹಣೆಯ ಸಮಸ್ಯೆಗಳು ಇತ್ಯಾದಿಗಳಿಗೆ ಸ್ಥಳೀಯ ಮಟ್ಟದಲ್ಲಿಯೇ ಪರಿಹಾರ ಕಂಡುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಪರಿಸರ ಸ್ನೇಹಿ ಜೀವನಶೈಲಿ, ಪ್ಲಾಸ್ಟಿಕ್ ಬಳಕೆಯ ನಿಯಂತ್ರಣ, ಶೂನ್ಯ ತ್ಯಾಜ್ಯ ಪರಿಕಲ್ಪನೆ ಮತ್ತು ನೀರಿನ ಸಂರಕ್ಷಣೆ ಮುಂತಾದ ವಿಚಾರಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಸಾವಯವ ಪದ್ಧತಿಗಳನ್ನು ಉತ್ತೇಜಿಸುವ ಮೂಲಕ ಸುಸ್ಥಿರ ಗ್ರಾಮಾಭಿವೃದ್ಧಿಗೆ ದಾರಿ ತೋರಿಸಲಾಗುತ್ತದೆ. ಸಂವಹನ ಕೌಶಲವು ಪರಿಣಾಮಕಾರಿ ನಾಯಕತ್ವದ ಮೂಲಭೂತ ಅಂಶವಾಗಿದೆ. ಜನರ ಸಮಸ್ಯೆಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುವುದು, ಆಡಳಿತದ ವಿವಿಧ ಹಂತಗಳೊಂದಿಗೆ ಸಂಪರ್ಕ ಸಾಧಿಸುವುದು ಮತ್ತು ಸಮುದಾಯವನ್ನು ಒಗ್ಗೂಡಿಸುವುದು ಶಿಬಿರದಲ್ಲಿ ಪ್ರಾಯೋಗಿಕ ವಿಧಾನಗಳ ಮೂಲಕ ಈ ಕೌಶಲಗಳನ್ನು ಬೆಳೆಸಲಾಗುತ್ತದೆ, ಇದರಿಂದ ಮಹಿಳಾ ಪ್ರತಿನಿಧಿಗಳು ಸಕ್ರಿಯ ಮತ್ತು ಆತ್ಮವಿಶ್ವಾಸಿ ನಾಯಕಿಯರಾಗಿ ಬೆಳೆಯುತ್ತಾರೆ.



ಈ ಶಿಬಿರದ ಪರಿಣಾಮಗಳು ಈಗ ತಳಮಟ್ಟದಲ್ಲಿಯೇ ಸ್ಪಷ್ಟವಾಗಿ ಗೋಚರಿಸುತ್ತಿವೆ. ಭಾಗವಹಿಸಿದ ಹಲವಾರು ಮಹಿಳಾ ಪ್ರತಿನಿಧಿಗಳು ತಮ್ಮ ಗ್ರಾಮಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿ, ಗ್ರಾಮಸಭೆಗಳಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು, ಸ್ವಚ್ಛತೆ ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವುದು, ಸ್ಥಳೀಯ ಸಮಸ್ಯೆಗಳಿಗೆ ಸಮೂಹದ ಮೂಲಕ ಪರಿಹಾರ ಕಂಡುಕೊಳ್ಳುವಂತಹ ಕಾರ್ಯಗಳನ್ನು ಯಶಸ್ವಿಯಾಗಿ ಕೈಗೊಂಡಿದ್ದಾರೆ. ಅವರಿಂದ ಲಭಿಸುತ್ತಿರುವ ಸಕಾರಾತ್ಮಕ ಪ್ರತಿಕ್ರಿಯೆಗಳು ಮತ್ತು ಸ್ಥಳೀಯ ಮಟ್ಟದಲ್ಲಿ ಕಂಡುಬರುತ್ತಿರುವ ಬದಲಾವಣೆಗಳು ಈ ಕಾರ್ಯಕ್ರಮದ ಸಾರ್ಥಕತೆಯನ್ನು ಎತ್ತಿ ಹಿಡಿಯುತ್ತಿವೆ.

ಈ ಇಡೀ ಪ್ರಯತ್ನಕ್ಕೆ ಶ್ರೀ ಅನಂತಕುಮಾರ್ ಅವರ ನಾಯಕತ್ವದ ಮಾದರಿಯೇ ಸ್ಫೂರ್ತಿಯಾಗಿದೆ. ಅವರು ಅಧಿಕಾರವನ್ನು ಕೇವಲ ಸ್ಥಾನಮಾನವಾಗಿ ನೋಡದೆ, ಜನರ ವಿಶ್ವಾಸ ಗಳಿಸುವ ಸಾಧನವಾಗಿ ಬಳಸಿಕೊಂಡಿದ್ದರು. ತಾವು ನಿಂತ ನೆಲದ ವರ್ತಮಾನವನ್ನು ಅರಿತು, ಭವಿಷ್ಯದ ದೃಷ್ಟಿಕೋನವನ್ನು ಹೊಂದಿದ್ದ ಅವರ ನಾಯಕತ್ವ ಶೈಲಿ ಇಂದಿನ ಗ್ರಾಮೀಣ ನಾಯಕತ್ವಕ್ಕೆ ದಾರಿದೀಪವಾಗಿದೆ.

ಒಟ್ಟಿನಲ್ಲಿ, 'ಗ್ರಾಮ ಚೇತನ' ಶಿಬಿರವು ಕೇವಲ ತರಬೇತಿ ಕಾರ್ಯಕ್ರಮವಲ್ಲ; ಅದು ತಳಮಟ್ಟದಲ್ಲಿ ನಾಯಕತ್ವವನ್ನು ರೂಪಿಸುವ, ಸಮಾಜದಲ್ಲಿ ಚೈತನ್ಯ ಮೂಡಿಸುವ ಮತ್ತು ರಾಷ್ಟ್ರ ನಿರ್ಮಾಣದ ಮಹತ್ಕಾರ್ಯಕ್ಕೆ ಪೂರಕವಾಗುವ ಒಂದು ಶಕ್ತಿಯಾಗಿದೆ.

ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

# ಹುಬ್ಬಳ್ಳಿಯ ಪಂಚಪಾಂಡವರು

ಹುಬ್ಬಳ್ಳಿಯ ನೀಲಿಜಿನ್ ರಸ್ತೆಯಲ್ಲಿರುವ ಅಚ್ಯುತ ಲಿಮಯೆಯವರ ಮನೆಯಲ್ಲಿ ವಿದ್ಯಾರ್ಥಿ ಪರಿಷತ್ತಿನ ಬೈಠಕ್ ನಡೆಯುವಲ್ಲಿ 60-70 ಜನ ಸೇರಿರುತ್ತಿದ್ದರು. ಬೈಠಕ್ ನಡೆಯುತ್ತಿರುವ ಹಾಗೆಯೇ ಅಲ್ಲೊಂದು ಮೂಲೆಯಲ್ಲಿ ಕುಳಿತಿದ್ದ ಐವರು ವಿದ್ಯಾರ್ಥಿಗಳು ಮಾತ್ರ ತಂತಮ್ಮ ಕಣ್ಣೊಳಗೇ ಏನೋ ಸನ್ನೆ ಮಾಡಿಕೊಂಡು ಸಂಭಾಷಣೆ ನಡೆಸುವರು. ಏನೋ ಚೇಷ್ಟೆ ನಡೆಸಲು ಹುನ್ನಾರದಲ್ಲಿರುವಂತೆ ಅವರ ವರ್ತನೆ ಕಾಣಿಸುತ್ತಿತ್ತು. ಆದರೆ, ನೋಡಲು ಉಡಾಳ ಹುಡುಗರಂತೆ ಕಾಣುತ್ತಿದ್ದ ಅವರು ವಾಸ್ತವವಾಗಿ ವಿದ್ಯಾರ್ಥಿ ಪರಿಷತ್ತಿನ ಸಮೂಹಶಕ್ತಿಯಾಗಿದ್ದರು. ತುರ್ತುಪರಿಸ್ಥಿತಿಯ ನಂತರದ ಕಾಲದಲ್ಲಿ ವಿದ್ಯಾರ್ಥಿ ಪರಿಷತ್ತಿನ ಪುನಶ್ಚೇತನಕ್ಕೆ ಕಂಕಣಬದ್ಧರಾದ ಅವರಲ್ಲಿ ಒಬ್ಬೊಬ್ಬರದೂ ಒಂದೊಂದು ವೈಚಿತ್ರ್ಯ, ವೈಶಿಷ್ಟ್ಯ.

ಅನಂತಕುಮಾರ್ ಲೇಖಕ, ಓದುಗಾರ, ಬಹು ಚಾಣಾಕ್ಷ. ಎಲ್ಲಿಗೆ ಹೋಗಲಿ ಯಾರನ್ನೇ ಆಗಲಿ ಮಾತನಾಡಿಸಿಕೊಂಡು ಬರ್ತೇನೆ, ಕೆಲಸ ಮುಗಿಸಿಕೊಂಡೇ ಬರ್ತೇನೆ ಎನ್ನುವಂಥ ಸ್ಥೈರ್ಯವುಳ್ಳವರು. ಇನ್ನು ವಿಷ್ಣುಕಾಂತ ಚಟಪಲ್ಲಿಯವರು ಪ್ರತಿ ಕೆಲಸವನ್ನು ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸುವವರು. ಎಡಗಾಲು ಮುಂದಿಟ್ಟರೇನು, ಬಲಗಾಲು ಇಟ್ಟರೇನು ಎನ್ನುವಂಥ ಸೂಕ್ಷ್ಮವನ್ನೂ ವಿಚಾರಮಾಡಿ ವ್ಯವಸ್ಥೆ ಮಾಡತಕ್ಕಂಥ ವ್ಯಕ್ತಿತ್ವವುಳ್ಳವರು.


ಗುಡ್ಡು ಇನಾಂದಾರರದ್ದು ಸಾಹಸಶೀಲ ಪ್ರವೃತ್ತಿ. ಇವತ್ತು ಪರಿಷತ್ತಿನ ನಿಧಿಗೆ ಧನಸಂಗ್ರಹಕ್ಕೆ ಹೊರಡಬೇಕು ಎನ್ನುವಾಗ ಕೆಲವರಿಗೆ ಮುಜುಗರ, ಹೋಗಿ ರೊಕ್ಕ ಕೇಳುವುದು ಹೇಗೆ ಎಂಬ ಸಂಕೋಚ. ಇನಾಂದಾರರು ಹಾಗಲ್ಲ. ಏನಂತೆ ಹೋಗೋದಪ್ಪ , ಕೇಳಿಯೇ ಬಿಡುವುದು, ಇದೇನು ನಮ್ಮ ಸಲುವಾಗಿ ಕೇಳೋದಲ್ಲವಲ್ಲ ಎಂಬ ಧೈರ್ಯ ಅವರದು. ಅನಿಲ್ ಸಹಸ್ರಬುದ್ಧೆಯವರು ಪ್ರತಿಭಾವಂತರಲ್ಲೇ ಅತ್ಯುನ್ನತ ಶ್ರೇಣಿಯ ವಿದ್ಯಾರ್ಥಿ. ಹತ್ತೂ ಸೆಮೆಸ್ಟರ್ ತರಗತಿಗಳಲ್ಲಿ ಮೊದಲ ರ‍್ಯಾಂಕ್ ಬಿಟ್ಟುಕೊಟ್ಟವರಲ್ಲ. ವಿದ್ಯಾರ್ಥಿ ಪರಿಷತ್ತಿನ ಕೆಲಸ ಎಲ್ಲ ಮುಗಿಸಿದ ಮೇಲೆ ರಾತ್ರಿ ನಾಲ್ಕು ತಾಸು ಕುಳಿತು ವ್ಯಾಸಂಗ ಮಾಡುವುದು ಅವರ ಸಂಕಲ್ಪ. ಮತ್ತೊಬ್ಬರು ಅಚ್ಯುತ ಲಿಮಯೆ ಹೆಚ್ಚು ಮಾತಿಲ್ಲದ ಸೌಮ್ಯ ವ್ಯಕ್ತಿತ್ವ. ಎಲ್ಲರನ್ನೂ ಸಂಘಟನೆಯಲ್ಲಿ ತೊಡಗಿಸುವುದೇ ಅವರ ಮುಖ್ಯ ಕರ್ತವ್ಯ. ಎಲ್ಲಿ ತಪ್ಪುಗಳಾಗುತ್ತವೋ ಅವನ್ನು ಸರಿಪಡಿಸುವುದೇ ಅವರ ಆದ್ಯತೆಯ ಕೆಲಸ. ದಿನವೂ ಕ್ರಿಕೆಟ್ ಆಡಿಕೊಂಡಿರುತ್ತಿದ್ದ ಅನಂತಕುಮಾರರನ್ನು ಛಲಬಿಡದೆ ವಿದ್ಯಾರ್ಥಿ ಪರಿಷತ್ತಿಗೆ ಕರೆದುತಂದವರೇ ಅಚ್ಯುತ ಲಿಮಯೆ. ವ್ಯಕ್ತಿಯ ವಿಶಿಷ್ಟತೆಯನ್ನು ಪತ್ತೆಹಚ್ಚಿ ಅಂಥವರನ್ನು ಸಂಘಟನೆಗೆ ಕರೆತರುವ, ಪರಿಷತ್ತನ್ನು ಬೆಳೆಸುವ ಕೆಲಸ ಅಚ್ಯುತ ಮಾಡುತ್ತಿದ್ದರು.

ಇಂಥ ವಿಶಿಷ್ಟ ವ್ಯಕ್ತಿತ್ವಗಳಿಂದ ಕೂಡಿದ 'ಟೀಮ್'ನಿಂದಾಗಿ ವಿದ್ಯಾರ್ಥಿ ಪರಿಷತ್ತನ್ನು ಬೆಳೆಸಲು ಸಾಧ್ಯವಾಯಿತು. ಇವರ್ಯಾರೂ ತಂತಮ್ಮ ವ್ಯಕ್ತಿವಿಶೇಷಕ್ಕೆ ಮಹತ್ವ ಕೊಟ್ಟವರಲ್ಲ. ಪರಿಷತ್ತಿನ ಕೆಲಸಗಳಿಗೆ ತಮ್ಮನ್ನು ತಾವು ಅರ್ಪಿಸಿಕೊಂಡು ಸಂಘಟನೆಯನ್ನು ಬೆಳೆಸಿದವರು. ಈ ಐವರೂ ಪರಸ್ಪರ ಒಬ್ಬರನ್ನೊಬ್ಬರು ಬಿಟ್ಟುಕೊಡುತ್ತಿರಲಿಲ್ಲ. ಏನೇ ಒಳ್ಳೆಯ ಸಂಗತಿ ಇದ್ದರೂ ಅದನ್ನು ಪ್ರಕಟವಾಗಿ ಹೇಳುತ್ತಿದ್ದರು. ಏನಾದರೂ ಒಂದು ತಪ್ಪಾಯಿತು ಅಂದರೆ ಕೂಡಲೇ ಅದನ್ನು ಸರಿಪಡಿಸುವುದು. ನೀನು ತಪ್ಪು ಮಾಡಿದೆ ಅದು ಇದು ಎಂಬ ದೂರಿಗೆ ಅವಕಾಶವೇ ಇರುತ್ತಿರಲಿಲ್ಲ. ಅಣ್ಣ ತಮ್ಮಂದಿರ ಹಾಗೆ ಈ ಐವರ ಗುಂಪು ಮೂವತ್ತೈದು ನಲವತ್ತು ವರುಷ ಕಳೆದರೂ ಅದೇ ಒಗ್ಗಟ್ಟನ್ನು ಕಾಯ್ದುಕೊಂಡು ಬಂದಿದೆ.

ವಿಜಯಾ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಎಂ.ಕೆ.ಶ್ರೀಧರ್ ಅವರನ್ನು ಗೆಳೆಯರ ಬಳಗವಾಗಲಿ ಪರಿಚಿತರ ಗುಂಪೇ ಇರಲಿ ಮೇಷ್ಟ್ರು ಎಂದೇ ಗುರುತಿಸುವುದು. ಅನಂತಕುಮಾರರೂ ಶ್ರೀಧರರನ್ನು ಮೇಷ್ಟ್ರೇ ಎಂದೇ ಕರೆಯುತ್ತಿದ್ದರು. ವಿದ್ಯಾರ್ಥಿ ಪರಿಷತ್ತಿನ ಒಡನಾಟವೇ ಇವರಿಬ್ಬರಲ್ಲಿ ಸ್ನೇಹಸಂಬಂಧಕ್ಕೆ ಕಾರಣವಾಗಿತ್ತು. 1970ರ ದಶಕದಲ್ಲೇ ಹುಬ್ಬಳ್ಳಿಯ ಒಂದು ಅಭ್ಯಾಸವರ್ಗಕ್ಕೆ ಶ್ರೀಧರ್ ಬಂದಿದ್ದಾಗಲೇ ಇವರ ಪರಿಚಯ ಬೆಳೆದಿತ್ತು. ಮುಂದೆ ಹುಬ್ಬಳ್ಳಿಯಲ್ಲೇ ಪರಿಷತ್ತಿನ ರಾಷ್ಟ್ರೀಯ ಅಧಿವೇಶನ ನಡೆದಾಗ ಸ್ನೇಹ ಇನ್ನಷ್ಟು ಆತ್ಮೀಯವಾಯಿತು.



ಪ್ರೊ. ಶ್ರೀಧರ್ ಹೇಳುವಂತೆ, ಉಳಿದ ಎಲ್ಲ ಕಾರ್ಯಕರ್ತರಂತೆಯೇ ಅನಂತಕುಮಾರರೂ ಕೆಲಸಮಾಡುತ್ತಿದ್ದರು; ಆದರೆ, ಅವರಲ್ಲಿ ನಾಯಕತ್ವದ ಅಸಾಮಾನ್ಯ ಲಕ್ಷಣ ಎದ್ದು ತೋರುವಂತಿತ್ತು. ಅನಂತಕುಮಾರ್ ಆಡುವ ಮಾತಿನಲ್ಲಾಗಲಿ, ಸಹ ಕಾರ್ಯಕರ್ತರೊಡನೆ ಕೆಲಸದಲ್ಲಿ ತೊಡಗಿರುವುದರಲ್ಲಾಗಲಿ ಒಬ್ಬ ನಾಯಕನೇ ಎದುರಿಗೆ ಇದ್ದು ಮಾರ್ಗದರ್ಶನ ಮಾಡುತ್ತಿರುವನೋ ಎಂಬಂತೆ ಭಾಸವಾಗುತ್ತಿತ್ತು. ಪ್ರಸ್ತಾಪವಾಗುವ ಯಾವುದೇ ವಿಷಯವಿರಲಿ, ಅದರ ಅಂಶವನ್ನು ಹೇಗೆ ಗ್ರಹಿಸಬೇಕು, ಹೇಗೆ ಮಂಡಿಸಬೇಕು, ಹೇಗೆ ವಿಶ್ಲೇಷಣೆ ಮಾಡಬೇಕು ಎನ್ನುವುದರ ಹೊಳಹುಗಳೆಲ್ಲ ಅನಂತಕುಮಾರರ ಮಾತಿನಲ್ಲೂ ಕಾರ್ಯದಲ್ಲೂ ಅಭಿವ್ಯಕ್ತಗೊಳ್ಳುತ್ತಿದ್ದವು. ಉಳಿದವರಿಗಿಂತ ಅವರು ಒಂದು ಒಂದು ಹೆಜ್ಜೆ ಮುಂದಿರುವಂತೆಯೇ ತೋರುತ್ತದೆ ಎನ್ನುವುದು ಶ್ರೀಧರರ ಖಚಿತ ಅಭಿಪ್ರಾಯ. ಇವತ್ತಿನ ಪರಿಭಾಷೆಯಲ್ಲಿ ನಾಯಕತ್ವ ಎಂದರೆ ಇದೇ ತಾನೇ.



ವ್ಯಕ್ತಿಯೊಬ್ಬರ ಬೆಳೆವಣಿಗೆಯಲ್ಲಿ ಸಂಘಟನೆಯ ಪಾತ್ರ ಇದ್ದೇ ಇರುತ್ತದೆ. ಆದರೆ, ಸಂಘದಲ್ಲೂ ಸಂಘಟನೆಯಲ್ಲೂ ಸಾವಿರಾರು ಜನ ಕೆಲಸ ಮಾಡುತ್ತಿರುತ್ತಾರೆ. ಎಲ್ಲರೂ ಅನಂತಕುಮಾರರಂತೆ ನಾಯಕರಾಗಲು ಸಾಧ್ಯವಿಲ್ಲವಷ್ಟೇ. ಆ ರೀತಿಯ ವ್ಯಕ್ತಿತ್ವ, ಸತ್ವ ಇಲ್ಲದವರು ಎಷ್ಟೇ ವರ್ಷ ಕೆಲಸಮಾಡಿದರೂ ಪ್ರಬಂಧಕರಾಗಿಯೇ ಉಳಿದಿರುತ್ತಾರೆಯೇ ಹೊರತು ಕಾರ್ಯಕರ್ತನ ಮಟ್ಟಕ್ಕೂ ಏರಲು ಸಾಧ್ಯವಿಲ್ಲ.

ಪುಟ 4 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

## ದೂರದೃಷ್ಟಿಯ ಅನಂತಪಥ

**ನೀತಿಯಿಂದ ಅನುಷ್ಠಾನಕ್ಕೆ:**
ಬಹಳಷ್ಟು ಬಾರಿ ನೀತಿಗಳು ಕಾಗದದ ಮೇಲೆ ಚೆನ್ನಾಗಿ ಕಾಣಿಸಿ, ಅನುಷ್ಠಾನದಲ್ಲಿ ನೆಲ ಕಚ್ಚುತ್ತವೆ. ಆದರೆ ಅನಂತಕುಮಾರ್ ಅವರ ಶೈಲಿ ವಿಭಿನ್ನವಾಗಿತ್ತು. ಯೂರಿಯಾ ಉತ್ಪಾದನೆ ಹೆಚ್ಚಿಸುವುದು, ಬಂದರುಗಳಲ್ಲಿ ಲೇಪನ ವ್ಯವಸ್ಥೆ ಕಲ್ಪಿಸುವುದು, ಸಾಗಾಣಿಕೆ ಸುಧಾರಿಸುವುದು — ಈ ಮೂರೂ ಕ್ಷೇತ್ರಗಳಲ್ಲಿ ಸಮಾನಾಂತರವಾಗಿ ಕಾರ್ಯ ನಡೆಸಿ, ರೈತರಿಗೆ ಸರಿಯಾದ ಸಮಯದಲ್ಲಿ ಸರಿಯಾದ ಸಂಪನ್ಮೂಲ ತಲುಪುವಂತೆ ಮಾಡಿದರು. ಯೋಜನೆಗಳು ಕೇವಲ ಕಡತಗಳಿಗೆ ಸೀಮಿತವಾಗದೆ, ಜನಸಾಮಾನ್ಯರ ಕೈಸೇರುವಂತೆ ಮಾಡಿದ ಈ ಪ್ರಕ್ರಿಯೆಯೇ ಅವರ ನಾಯಕತ್ವದ ಯಶಸ್ಸಿನ ಗುಟ್ಟು.



**ತೇಜಸ್ವಿನಿ ಅನಂತಕುಮಾರ್: ಆಶಯಗಳಿಗೆ ಜೀವ ತುಂಬಿದ ನಾಯಕತ್ವ"**
"ಅನಂತಕುಮಾರ್ ಅವರು ಬಿತ್ತಿದ ದೂರದೃಷ್ಟಿಯ ಬೀಜ ಇಂದು ತೇಜಸ್ವಿನಿ ಅನಂತಕುಮಾರ್ ಅವರ ಸಮರ್ಥ ನೇತೃತ್ವದಲ್ಲಿ ಹೆಮ್ಮರವಾಗಿ ಬೆಳೆದಿದೆ. ಈ ಸಂಸ್ಥೆಯನ್ನು ಕೇವಲ ಒಂದು ಸೇವಾ ಕೇಂದ್ರವಾಗಿ ಉಳಿಸದೆ, ಇಂಧನ ಸ್ವಾವಲಂಬನೆಯ 'ಜೀವಂತ ಪ್ರಯೋಗಶಾಲೆ'ಯನ್ನಾಗಿ ಅವರು ರೂಪಿಸಿದ್ದಾರೆ. ಪೆಟ್ರೋಲಿಯಂ ಇಂಧನಗಳ ಮೇಲಿನ ಅವಲಂಬನೆ ತಗ್ಗಿಸಿ, ಪರಿಸರ ಸ್ನೇಹಿ ಇಂಧನ ಬಳಸಬೇಕೆಂಬ ಅವರ ದೃಢ ಸಂಕಲ್ಪವು ಇಂದು ಅದಮ್ಯ ಚೇತನದ ಪ್ರತಿ ತುತ್ತಿನಲ್ಲೂ ಸಾಕಾರಗೊಳ್ಳುತ್ತಿದೆ. ಬೆಂಗಳೂರಿನಿಂದ ಅಯೋಧ್ಯೆಯವರೆಗೆ ಸಂಸ್ಥೆಯನ್ನು ವಿಸ್ತರಿಸಿ, 1.60 ಲಕ್ಷ ಮಕ್ಕಳ ಹಸಿವು ನೀಗಿಸುತ್ತಾ ಪತಿಯ ಆಶಯಗಳನ್ನು ಅಕ್ಷರಶಃ ಕಾರ್ಯರೂಪಕ್ಕೆ ತಂದಿರುವ ಅವರ ಕಾರ್ಯವೈಖರಿಯೇ ನಿಜವಾದ ನಾಯಕತ್ವದ ಉತ್ತರಾಧಿಕಾರ."

ಇಂದು ಇಡೀ ಭಾರತ ಎಲ್‌ಪಿಜಿ ಅಭಾವದ ಚಿಂತೆಯಲ್ಲಿರುವಾಗ, ಒಂದು ಸಂಸ್ಥೆ ಹದಿನಾಲ್ಕು ವರ್ಷಗಳ ಮೊದಲೇ ಆ ಸಂಕಷ್ಟಕ್ಕೆ ಉತ್ತರ ಕಂಡುಕೊಂಡಿತ್ತು. ಒಂದು ನಾಯಕ ಇದ್ದ ಕಾಲದಲ್ಲಿ ನೆಟ್ಟ ಬೀಜ, ಇಂದು ಲಕ್ಷ ಮಕ್ಕಳ ಹಸಿವು ನೀಗಿಸುವ ಮರವಾಗಿ ನಿಂತಿದೆ . 14 ವರ್ಷಗಳ ಹಿಂದೆಯೇ ಇಂಧನ ಸ್ವಾವಲಂಬನೆ ಸಾಧಿಸಿದ ಅದಮ್ಯ ಚೇತನ, ಇಂದು ದೇಶಕ್ಕೆ ಮಾದರಿಯಾಗಿದೆ. ತೇಜಸ್ವಿನಿ ಅವರ ನೇತೃತ್ವದಲ್ಲಿ ಈ ಯಜ್ಞ ಅವಿರತವಾಗಿ ಸಾಗುತ್ತಿದೆ. ಜನೌಷಧಿಯಿಂದ ಹಿಡಿದು ಶೂನ್ಯ ಇಂಧನ ಮಾದರಿಯವರೆಗೆ ಎಲ್ಲವೂ ಒಂದೇ ಗುರಿಯತ್ತ ಸಾಗುತ್ತಿವೆ: ಅದುವೇ ಜನಸಾಮಾನ್ಯರ ಹಿತ. ಇಂದಿನ ಲಾಭಕ್ಕಾಗಿ ಅಲ್ಲದೆ, ನಾಳೆಯ ಸುಸ್ಥಿರ ಭವಿಷ್ಯಕ್ಕಾಗಿ ಕೆಲಸ ಮಾಡುವ ನಾಯಕತ್ವವೇ ನಿಜವಾದ ಜನನಾಯಕತ್ವ.

ಪುಟ 3

## ಹುಬ್ಬಳ್ಳಿಯ ಪಂಚಪಾಂಡವರು

ಪ್ರೊ. ಎಂ.ಕೆ. ಶ್ರೀಧರ್ ಗುರುತಿಸುವಂತೆ , ಸಂಘಟನೆಗೆ ಸೇರುವವರಲ್ಲಿ ಮೂರು ರೀತಿಯ ಜನರನ್ನು ಗುರುತಿಸಬಹುದು. ಹೇಳಿದ ಕೆಲಸ ಮಾಡುವವರು ಪ್ರಬಂಧಕರು. ಇದನ್ನು ತೆಗೆದುಕೊಂಡು ಹೋಗಿ ಇಂಥಲ್ಲಿ ಇಡಿ ಎಂದರೆ ಅಷ್ಟಕ್ಕೆ ಮುಗಿಯಿತು. ಪ್ರಬಂಧಕರೆಂದರೆ, ನೀವು ಹೇಳಿದ್ದಕ್ಕೇ ಆ ಕೆಲಸ ಮಾಡುವವರು ಅವರು. ಕಾರ್ಯಕರ್ತನಿಗೆ ನೀವು ಕೆಲಸ ಹೇಳಬೇಕಾಗಿಲ್ಲ, ಅದು ತನ್ನ ಕೆಲಸ ಅಂದುಕೊಂಡು ಶ್ರದ್ಧಾಪೂರ್ವಕ ಮಾಡುತ್ತಾನೆ. ಆದರೆ ಕಾರ್ಯಕರ್ತರೆಲ್ಲ ನಾಯಕರಾಗುವುದಿಲ್ಲ. ನಾಯಕನೆನಿಸಿಕೊಳ್ಳಬಲ್ಲವನು ತಾನು ಮಾಡಬೇಕಾದ ಕಾರ್ಯವನ್ನು ಪೂರ್ವಭಾವಿಯಾಗಿ ದೃಷ್ಟಿಯಲ್ಲಿಟ್ಟುಕೊಂಡು ಮುಂದಿನ ಹೆಜ್ಜೆಗೆ ಒಯ್ಯಬಲ್ಲವನಾಗಿರುತ್ತಾನೆ. ಅನಂತಕುಮಾರ್ ಇಂಥ ಗುಣಲಕ್ಷಣವುಳ್ಳವರಾಗಿದ್ದರು.

ಅನಂತ್ ಅವರಲ್ಲಿ ಪ್ರತಿಭೆಯಿತ್ತು, ಶಕ್ತಿಸಾಮರ್ಥ್ಯಗಳಿದ್ದವು. ಅವೆಲ್ಲ ಪೋಷಕಗುಣಗಳು ಅವರಿಗೆ ಲಭ್ಯವಾಗಿದ್ದು ಅವರ ತಾಯಿ ಗಿರಿಜಾ ಶಾಸ್ತ್ರಿಯವರಿಂದಲೇ. ಮುಂದೆ ಅನಂತಕುಮಾರ್ ತಮ್ಮ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ತಮ್ಮನ್ನು ತಾವು ತೋರ್ಪಡಿಸಿಕೊಳ್ಳುವುದಕ್ಕೆ ತಕ್ಕ ಅವಕಾಶವನ್ನು ವಿದ್ಯಾರ್ಥಿ ಪರಿಷತ್ ಕಲ್ಪಿಸಿಕೊಟ್ಟಿತು.

ಅನಂತಕುಮಾರರಲ್ಲಿದ್ದ ಬಹುಮುಖ್ಯವಾದ ವಿಶಿಷ್ಟಗುಣವೇನೆಂದರೆ, ಅವರು ಬೌದ್ಧಿಕವಾಗಿ ಮಾತ್ರವಲ್ಲದೆ ತಂತ್ರಪೂರ್ಣವಾಗಿಯೂ ಯೋಚಿಸಬಲ್ಲವರಾಗಿದ್ದರು. ಸಮಾಜದಲ್ಲಿ ಅಸಾಧಾರಣ ಬೌದ್ಧಿಕಸಾಮರ್ಥ್ಯವುಳ್ಳ ಜನರು ಅನೇಕರಿರುತ್ತಾರೆ. ಆದರೆ ಅವರಿಗೆ ಯಾವುದಾದರೊಂದು ವಿಷಯವನ್ನು ಉಳಿದವರಿಗೆ ಮನದಟ್ಟಾಗುವ ಹಾಗೆ ವಿವರಿಸಬಲ್ಲ, ಸಂದರ್ಭಕ್ಕೆ ತಕ್ಕ ಹಾಗೆ ಸ್ಟ್ರಾಟೆಜಿಕ್ ಆಗಿ, ತಂತ್ರಪೂರ್ಣವಾಗಿ ಅನ್ವಯಿಸಬಲ್ಲ ಪರಿಜ್ಞಾನವಿರುವುದಿಲ್ಲ. ಬರಿಯ ತಂತ್ರಗಾರಿಕೆಯಿಂದಲೂ ಪ್ರಯೋಜನವಿಲ್ಲ. ಅನೇಕ ಜನನಾಯಕರು ತಂತ್ರಗಾರಿಕೆಯಲ್ಲಿ ಪರಿಣತರಿರುತ್ತಾರೆ, ಆದರೆ, ಬೌದ್ಧಿಕವಾಗಿ ಟೊಳ್ಳಾಗಿರುವುದೇ ಹೆಚ್ಚು.

ಇವೆರಡೂ ಬಗೆಯ ಜನರಿಗಿಂತ ಅನಂತಕುಮಾರರ ವ್ಯಕ್ತಿತ್ವ ವಿಭಿನ್ನವೂ ವಿಶಿಷ್ಟವೂ ಆದುದೆಂದು ಶ್ರೀಧರ್ ಗುರುತಿಸುತ್ತಾರೆ. ಅವರಿಗೆ ಬೌದ್ಧಿಕವಾಗಿ ಬೆಳೆಯುವ ಹಂಬಲವಿತ್ತು. ಪುಸ್ತಕಗಳ ಓದು, ತಿಳಿದವರಿಂದ ವಿಷಯಗ್ರಹಣೆ, ವಿಶ್ಲೇಷಣಾ ಶಕ್ತಿ- ಇವೆಲ್ಲ ಅವರ ಬೌದ್ಧಿಕಸಾಮರ್ಥ್ಯಕ್ಕೆ ಪೋಷಕವಾದವು. ಇದರೊಡನೆ ಅವರಲ್ಲಿದ್ದ ತಂತ್ರಪೂರ್ಣವಾಗಿ ಯೋಚಿಸುವಂಥ ಶಕ್ತಿಯು ಬೌದ್ಧಿಕ ಸಾಮರ್ಥ್ಯಕ್ಕೆ ಪೂರಕವಾಗಿತ್ತು. ಇದೊಂದು ಅಪೂರ್ವವಾದ ಸಮನ್ವಯವೇ ನಿಜ.

ವಿದ್ಯಾರ್ಥಿ ಪರಿಷತ್ತು ಹೇಳುವ ಒಂದು ಮುಖ್ಯ ಅಂಶವೆಂದರೆ ವ್ಯಕ್ತಿತ್ವ ನಿರ್ಮಾಣದಿಂದ ರಾಷ್ಟ್ರ ನಿರ್ಮಾಣ. ತನ್ನ ವ್ಯಕ್ತಿತ್ವವನ್ನು ಸರಿಪಡಿಸಿಕೊಂಡು ರಾಷ್ಟ್ರನಿರ್ಮಾಣದ ಕರ್ತವ್ಯದಲ್ಲಿ ತೊಡಗಿಸಿಕೊಳ್ಳುವುದು. ಅನಂತಕುಮಾರರಿಗೆ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ವಿದ್ಯಾರ್ಥಿ ಪರಿಷತ್ತಿನಂತಹ ಸಂಘಟನೆಯಿಂದ ಅವಕಾಶವೊದಗಿಬಂದಿತು. ಇಲ್ಲಿ ಅವರಿಗೆ ಸಿಕ್ಕ ಟೀಮ್‌ನ ಬೆಂಬಲದಂತೆಯೇ ಮುಂದೆ ರಾಜ್ಯ ತಂಡಕ್ಕೆ ಪೂರ್ಣಾವಧಿ ಕಾರ್ಯಕರ್ತರಾಗಿ ಹೋದಾಗ ದತ್ತಾತ್ರೇಯ ಹೊಸಬಾಳೆ, ಕೃಷ್ಣಭಟ್ಟರಂಥ ಸಮರ್ಥರ ಮಾರ್ಗದರ್ಶನ ಲಭ್ಯವಾಯಿತು. ರಾಷ್ಟ್ರಮಟ್ಟದ ಚಟುವಟಿಕೆಗಳಲ್ಲೂ ಮದನದಾಸ್‌ರಂಥವರ ಸಾಹಚರ್ಯ ಒದಗಿ ಬಂದಿತು. ಹೀಗೆ ಎಲ್ಲರ ಜೊತೆಗೆ ಸೇರಿಕೊಂಡು ಕೆಲಸಮಾಡುವಂಥ ಅವಕಾಶ ಲಭ್ಯವಾದುದರ ಜೊತೆಗೇ ಅನಂತಕುಮಾರ್ ತಮ್ಮ ವ್ಯಕ್ತಿತ್ವವನ್ನೂ ಬೆಳೆಸಿಕೊಳ್ಳುತ್ತ ಹೋದರು. ಮುಂದೆ ಅವರಿಗೆ ರಾಜಕೀಯಕ್ಕೆ ಹೋಗುವಂಥ ಅವಕಾಶವೂ ಒದಗಿಬಂದಿತು.

ಸಮಾಜಕ್ಕಾಗಿ ಏನನ್ನಾದರೂ ಮಾಡಬೇಕೆಂಬ ಹಂಬಲವೇನೋ ಅನಂತಕುಮಾರರಿಗೆ ಮೊದಲಿನಿಂದಲೂ ಇದ್ದೇ ಇತ್ತು. ಆದರೆ ಅದಕ್ಕೆ ಅಧಿಕಾರದ ಅವಶ್ಯಕತೆಯಿದೆ ಎನ್ನುವುದು ಅವರ ಅರಿವಿಗೆ ಬಂದಿತ್ತು. ಅಧಿಕಾರ ಇಲ್ಲವೆಂದರೆ ಮನಸ್ಸಿನಲ್ಲೇ ಮಂಡಿಗೆ ತಿಂದುಕೊಂಡು ಕೂಡಬೇಕಾಗುತ್ತದೆ. ಆದ್ದರಿಂದ ತಾವು ಅಧಿಕಾರ ತೆಗೆದುಕೊಳ್ಳಲೇ ಬೇಕು ಎನ್ನುವ ಛಲ ಅವರ ಮನದಲ್ಲಿ ಮೂಡಿತ್ತು. ಸ್ವಭಾವತಃ ಛಲವಾದಿಯಾದ ಅನಂತಕುಮಾರರಿಗೆ ದೈವಬಲದೊಡನೆ ತಂದೆತಾಯಿಯರ ಬೆಂಬಲವೂ ಸಂಪೂರ್ಣವಾಗಿತ್ತು. ತಮ್ಮ ಮಗ ಡಾಕ್ಟರೋ ಇಂಜಿನಿಯರೋ ಆಗಲೆಂದು ಅವರ ಪೋಷಕರು ಬಯಸಲಿಲ್ಲ. ಉಳಿದ ತಾಯಿತಂದೆಯರಂತೆ ಹೇಗೋ ದುಡಿದುಕೊಂಡು ಹಣಸಂಪಾದನೆ ಮಾಡಲಿ ಎಂದು ಹಂಬಲಿಸದೆ, ತಮ್ಮ ಮಗ ದೊಡ್ಡ ರಾಜಕಾರಣಿಯಾಗಬೇಕು, ಲೀಡರ್ ಆಗಬೇಕು ಎಂದೇ ಅಪೇಕ್ಷೆಪಟ್ಟರು.

ಎಂ.ಟಿ.ಎಸ್. ಕಾಲೊನಿಯಲ್ಲಿ ಗಿರಿಜಾ ಶಾಸ್ತ್ರಿಯವರ ಒಡನಾಡಿಗಳಾಗಿದ್ದ ಮಹಿಳಾ ಮಂಡಲಿಯ ಸದಸ್ಯರಲ್ಲಿ ಶ್ರೀಮತಿ ಪದ್ಮಾ ಅನಂತರಾಮಯ್ಯನವರೂ ಒಬ್ಬರು. ಅವರ ಮಗ ವಾಸು ಅನಂತಕುಮಾರರಿಗಿಂತ ಸ್ವಲ್ಪ ದೊಡ್ಡವನೋ ಏನೋ. ಪಿ.ಯು. ಸಿ. ಮುಗಿಸಿದ ಮೇಲೆ ವಾಸುವನ್ನು ಎಲ್ಲಿ ಸೇರಿಸುತ್ತೀರಿ ಎಂದು ಗಿರಿಜಾ ಕೇಳಿದರು. ಅವನು ಬಿ.ಇ. ಓದುತ್ತಾನಮ್ಮ, ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಸೀಟು ಸಿಕ್ಕಿದೆ ಎಂದು ಹೇಳಿದ ಪದ್ಮಾ , ಕುಮಾರ ಮುಂದೆ ಏನು ಮಾಡುತ್ತಾನೆ? ಎಂದು ಕೇಳಿದರು. ಕಾಲೊನಿಯಲ್ಲಿ ಎಲ್ಲರೂ ಅನಂತಕುಮಾರರನ್ನು ಕುಮಾರ ಎಂದೇ ಕರೆಯುತ್ತಿದ್ದುದು. ಗಿರಿಜಾ ಯಾವ ಹಿಂಜರಿಕೆಯೂ ಇಲ್ಲದೆ ನನ್ನ ಮಗ ರಾಜಕೀಯದಲ್ಲಿ ಮುಂದುವರಿಯುತ್ತಾನೆ ಎಂದರು. ಇಂಜಿನಿಯರಿಂಗ್, ವೈದ್ಯಕೀಯಗಳಂತೆಯೇ ರಾಜಕಾರಣವನ್ನು ಮಗನ ಭವಿಷ್ಯಕ್ಕೆ ಒಂದು ನೆಲೆಯಾಗಿ ಗುರುತಿಸಿದ ಗಿರಿಜಾ ಶಾಸ್ತ್ರಿಯವರ ನಿಲುವು ಸಾಂಸಾರಿಕ ವಲಯಗಳಲ್ಲಿ ಅಚ್ಚರಿ ಮೂಡಿಸಿದ್ದು ಹೇಗೇ ಇರಲಿ, ಅವರ ನಿರ್ಧಾರದಲ್ಲಿ ಅತ್ಯಂತ ಆತ್ಮವಿಶ್ವಾಸ, ಅಭಿಮಾನಗಳಿದ್ದುದೂ ಅಷ್ಟೇ ನಿಜ.

# ಬಹುಮುಖ ಪ್ರತಿಭೆ, ಅಪಾರ ನೆನಪಿನ ಶಕ್ತಿಯ ಗಣಿ: ಶ್ರೀ ಅನಂತಕುಮಾರ್

ನಾನು ಕಂಡಂತೆ



ಅನಂತಕುಮಾರ್

ರಾಜಕೀಯ ನಾಯಕತ್ವದ ಕುರಿತು ಒಂದು ಮಾತಿದೆ: "ವರ್ಚಸ್ವೀ ನಾಯಕರು ಚುನಾವಣೆಯಲ್ಲಿ ಗೆಲ್ಲುತ್ತಾರೆ, ಆದರೆ ಸಂಘಟನಾತ್ಮಕ ನಾಯಕರು ರಾಷ್ಟ್ರವನ್ನು ನಿರ್ಮಿಸುತ್ತಾರೆ." ಈ ಮಾತಿಗೆ ಜೀವಂತ ಉದಾಹರಣೆಯಾಗಿದ್ದವರು ಅನಂತಕುಮಾರ್‌ಜಿ. ಭಾರತ ಸರ್ಕಾರದ ನಗರಾಭಿವೃದ್ಧಿ ಸಚಿವಾಲಯದಲ್ಲಿ (1999–2004) ಅವರೊಂದಿಗೆ ಕಾರ್ಯನಿರ್ವಹಿಸುವ ಸೌಭಾಗ್ಯ ನನಗೆ ಸಿಕ್ಕಿತ್ತು. ಆ ಅವಧಿಯಲ್ಲಿ ಅವರೊಂದಿಗೆ ಕಾರ್ಯನಿರ್ವಹಿಸಿದ ಅನುಭವವು ನನಗೆ ಶಾಶ್ವತವಾಗಿ ಪ್ರೇರಣೆಯಾಗಿದೆ. ಅವರ ದೇಶಹಿತದ ದೃಷ್ಟಿಕೋನ ಮತ್ತು ಕಾರ್ಯವೈಖರಿ ನಮ್ಮೆಲ್ಲರ ಮೇಲೆ ಶಾಶ್ವತ ಪ್ರಭಾವ ಬೀರಿದೆ.

**ತಂತ್ರಜ್ಞಾನದ ಮುಂಚೂಣಿ ನಾಯಕ:**

ಅನಂತಕುಮಾರ್‌ಜೀ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಲ್ಲಿ ಸದಾ ಮುಂಚೂಣಿಯಲ್ಲಿದ್ದರು. 1990ರ ದಶಕದಲ್ಲಿಯೇ ತಮ್ಮ ದೈನಂದಿನ ವೇಳಾಪಟ್ಟಿ, ಸಚಿವಾಲಯದ ಯೋಜನೆಗಳು ಹಾಗೂ ಸಾಧನೆಗಳನ್ನು ಸಾರ್ವಜನಿಕರ ಮುಂದೆ ತೆರೆದಿಡಲು ಪ್ರತ್ಯೇಕ ವೆಬ್ ಪೋರ್ಟಲ್ ಆರಂಭಿಸಿದ ಮೊಟ್ಟಮೊದಲ ಕೇಂದ್ರ ಸಚಿವರಲ್ಲಿ ಅವರು ಅಗ್ರಗಣ್ಯರು. ವಿವಿಧ ರಾಜ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು ಕಚೇರಿಯಲ್ಲೇ ಕುಳಿತು ವೀಕ್ಷಿಸಲು ಆ ಕಾಲಘಟ್ಟದಲ್ಲೇ 'ವಿಡಿಯೋ ಕಾನ್ಫರೆನ್ಸಿಂಗ್' ತಂತ್ರಜ್ಞಾನವನ್ನು ಬಳಕೆಗೆ ತಂದು ಎಲ್ಲರನ್ನೂ ಅಚ್ಚರಿಗೊಳಿಸಿದ್ದರು. ಅವರು ನಗರಾಭಿವೃದ್ಧಿ ಸಚಿವರಾಗಿದ್ದ ಸಂದರ್ಭದಲ್ಲಿ, ಸಚಿವಾಲಯಕ್ಕೆ ಮೀಸಲಿಟ್ಟ ಭಾರೀ ಮೊತ್ತದ ಬಜೆಟ್ ಬಳಕೆಯ ಬಗ್ಗೆ ಕೆಲವು ಮಾಧ್ಯಮಗಳು ಸಂಶಯ ವ್ಯಕ್ತಪಡಿಸಿದ್ದವು. ಇಷ್ಟೊಂದು ದೊಡ್ಡ ಮೊತ್ತ ಸದ್ಬಳಕೆಯಾಗುವುದು ಸಾಧ್ಯವೇ ಇಲ್ಲ ಎಂಬ ಟೀಕೆಗಳು ಕೇಳಿಬಂದಾಗ ಅನಂತಕುಮಾರ್ ಅವರು ವಿಚಲಿತರಾಗಲಿಲ್ಲ. ಬದಲಾಗಿ, 'ಇಂಡಿಯಾ ಟುಡೇ' ಪತ್ರಿಕೆಯ ಅಂದಿನ ಪ್ರಧಾನ ಸಂಪಾದಕ ಪ್ರಭು ಚಾವ್ಲಾ ಸೇರಿದಂತೆ ದಿಗ್ಗಜ ಪತ್ರಕರ್ತರನ್ನು ಆಹ್ವಾನಿಸಿ ಒಂದು ವಿಶೇಷ ಗೋಷ್ಠಿಯನ್ನು ಏರ್ಪಡಿಸಿದರು.

**ಅಧಿಕಾರಿಗಳ ಬದಲು ಸ್ವತಃ ಪ್ರಸ್ತುತಿ: ಕಾರ್ಯದಕ್ಷತೆಗೆ ಸಾಕ್ಷಿ**

ಸಾಮಾನ್ಯವಾಗಿ ಸಚಿವರು ಅಂಕಿ-ಅಂಶಗಳಿಗಾಗಿ ಅಧಿಕಾರಿಗಳನ್ನು ಅವಲಂಬಿಸುತ್ತಾರೆ. ಆದರೆ ಇಲ್ಲಿ ಅನಂತಕುಮಾರ್ ಅವರು ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿಗಳ ಮೇಲೆ ಅವಲಂಬಿತರಾಗದೆ, ತಾವೇ ಸ್ವತಃ ಮುಂಚೂಣಿಯಲ್ಲಿ ನಿಂತು ಎರಡು ಗಂಟೆಗಳ ಕಾಲ ಸುದೀರ್ಘ ಪ್ರೆಸೆಂಟೇಶನ್ ನೀಡಿದರು. ಸಚಿವಾಲಯದ ಪ್ರತಿಯೊಂದು ಯೋಜನೆಯ ವೆಚ್ಚದ ವಿವರಗಳನ್ನು ಎಳೆಎಳೆಯಾಗಿ, ಸ್ಪಷ್ಟ ಅಂಕಿ-ಅಂಶಗಳ ಸಮೇತ ಅವರು ವಿವರಿಸಿದ ರೀತಿ ಅಪ್ರತಿಮವಾದುದು. ಸಚಿವಾಲಯದ ಕಾರ್ಯನಿರ್ವಹಣೆಯ ಬಗ್ಗೆ ಅವರಿಗಿದ್ದ ಆಳವಾದ ಒಳನೋಟ ಮತ್ತು ಪಟ್ಟು ಎಲ್ಲರಿಗೂ ಅರಿವಾಯಿತು. ಬಜೆಟ್‌ನಲ್ಲಿ ನಿಗದಿಪಡಿಸಿದ್ದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ (ಶೇ. 85ಕ್ಕೂ ಹೆಚ್ಚು) ಹಣವು ಅತ್ಯಂತ ಪಾರದರ್ಶಕವಾಗಿ ಬಳಕೆಯಾಗಿರುವುದನ್ನು ಕಂಡು ಪತ್ರಕರ್ತರೇ ದಂಗಾದರು. ಈ ವಿಷಯ ತಿಳಿದ ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ತಮ್ಮ ಕ್ಯಾಬಿನೆಟ್ ಸಭೆಯಲ್ಲಿ ಅನಂತಕುಮಾರ್ ಅವರ ಕಾರ್ಯದಕ್ಷತೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದರು. ಅವರು ಇಂದು ನಮ್ಮೊಂದಿಗಿದ್ದರೆ ಕೃತಕ ಬುದ್ಧಿಮತ್ತೆ (AI) ಮತ್ತು ಡಿಜಿಟಲ್ ಆಡಳಿತ ವ್ಯವಸ್ಥೆಯನ್ನು ಬಳಸಿಕೊಂಡು ಆಡಳಿತದಲ್ಲಿ ದಕ್ಷತೆ ಹಾಗೂ ನಾಗರಿಕರ ನೇರ ಸಹಭಾಗಿತ್ವದ ಅನುಷ್ಠಾನಕ್ಕೆ ದೊಡ್ಡ ಮುನ್ನುಡಿ ಬರೆಯುತ್ತಿದ್ದರು ಎಂಬುದರಲ್ಲಿ ಸಂಶಯವಿಲ್ಲ.

ಅನಂತಕುಮಾರ್ ಅವರು ಒಬ್ಬ ಅದ್ಭುತ ಭಾಷಣಕಾರರಾಗಿದ್ದರು. ಅವರು ಸಿದ್ಧಪಡಿಸಿದ ಭಾಷಣಗಳನ್ನು ಓದಿದ ಸಂದರ್ಭಗಳು ತೀರಾ ವಿರಳ. ಅವರದು ಅಸ್ಖಲಿತ ವಾಣಿ ಮತ್ತು ತೀಕ್ಷ್ಣ ವಿಶ್ಲೇಷಣಾ ಶಕ್ತಿ. ತಮ್ಮ ಭಾಷಣಗಳಲ್ಲಿ ಅವರು ಸ್ವಾನುಭವದ ಜೊತೆಗೆ, ಬಹಳ ಮುತುವರ್ಜಿಯಿಂದ ಆಯ್ದುಕೊಂಡ ಉಪಾಖ್ಯಾನಗಳನ್ನು ಬಳಸುತ್ತಿದ್ದರು. ಅವರ ಮಾತುಗಳಲ್ಲಿ ನಾಟಕೀಯತೆ ಇರುತ್ತಿರಲಿಲ್ಲ, ಬದಲಾಗಿ ಮೌಲ್ಯಯುತವಾದ ಮತ್ತು ತೂಕಬದ್ಧವಾದ ಪದಗಳಿರುತ್ತಿದ್ದವು. ಪ್ರತಿಯೊಂದು ಮಾತಿನಲ್ಲೂ ಒಂದು ಸದಾಶಯ ಮತ್ತು ಸ್ಪಷ್ಟ ಉದ್ದೇಶವಿರುತ್ತಿತ್ತು. ಅವರ ಭಾಷಣವನ್ನು ಕೇಳುವುದೆಂದರೆ ಅದೊಂದು ಶ್ರೀಮಂತ ಬೌದ್ಧಿಕ ಅನುಭವ ಪಡೆಯುವುದಕ್ಕೆ ಸಮನಾಗಿತ್ತು. ಅವರ ಖಚಿತವಾದ ಮಾತುಗಳು ಕೇಳುಗರ ಮನಸ್ಸಿನ ಮೇಲೆ ಶಾಶ್ವತ ಪ್ರಭಾವ ಬೀರುತ್ತಿದ್ದವು.



ಅವರ ಈ ವಾಕ್ಪಟುತ್ವಕ್ಕೆ ಮುಖ್ಯ ಕಾರಣ ಅವರ ಓದಿನ ಹಸಿವು. ಅವರು ಒಬ್ಬ ಅಪರಿಮಿತ ಓದುಗರಾಗಿದ್ದರು. ಕೇವಲ ರಾಜಕೀಯ ಅಥವಾ ಅಭಿವೃದ್ಧಿ ಕ್ಷೇತ್ರಕ್ಕೆ ಸಂಬಂಧಿಸಿದ ಕೃತಿಗಳನ್ನಷ್ಟೇ ಅಲ್ಲದೆ; ಇತಿಹಾಸ, ತತ್ವಶಾಸ್ತ್ರ, ಸಾಹಿತ್ಯ ಮತ್ತು ಅತ್ಯಾಧುನಿಕ ತಂತ್ರಜ್ಞಾನ ಸೇರಿದಂತೆ ವೈವಿಧ್ಯಮಯ ವಿಷಯಗಳ ಪುಸ್ತಕಗಳನ್ನು ಅವರು ಸದಾ ಖರೀದಿಸಿ ಓದುತ್ತಿದ್ದರು. ವೈಯಕ್ತಿಕವಾಗಿ ಅವರ ಭಾಷಣಗಳು ನನಗೆ ಬಹಳ ಇಷ್ಟವಾಗುತ್ತಿದ್ದವು. ಯಾವುದೇ ಕಠಿಣ ವಿಷಯವನ್ನಾದರೂ ಅತ್ಯಂತ ಸುಲಲಿತವಾಗಿ ಮತ್ತು ಸರಳವಾಗಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ವಿವರಿಸುವ ಅವರ ಸಾಮರ್ಥ್ಯ ನಿಜಕ್ಕೂ ಅದ್ಭುತವಾದುದು. ಅವರ ಮಾತುಗಳು ಕೇವಲ ಮಾಹಿತಿಯನ್ನಷ್ಟೇ ನೀಡದೆ, ವಿಷಯದ ಬಗ್ಗೆ ಆಳವಾದ ತಿಳಿವಳಿಕೆಯನ್ನು ಮೂಡಿಸುತ್ತಿದ್ದವು.

ನನ್ನ ನೆನಪಿನಾಳದಲ್ಲಿ ಅಚ್ಚೊತ್ತಿರುವ ಒಂದು ಘಟನೆ ಅನಂತಕುಮಾರ್ ಅವರ ಜನಪರ ಕಾಳಜಿಯನ್ನು ತೆರೆದಿಡುತ್ತದೆ. ಒಮ್ಮೆ ಹಗಲಿಡೀ ಸಭೆ, ಸಮಾರಂಭಗಳ ಬಳಿಕ ಅವರು ಸಂಜೆ ಕಚೇರಿಗೆ ಮರಳಿದಾಗ 50ಕ್ಕೂ ಹೆಚ್ಚು ಜನರು ಅವರಿಗಾಗಿ ಕಾಯುತ್ತಿದ್ದರು. ಕಾಯುತ್ತಿದ್ದವರ ಹೆಸರಿನ ಪಟ್ಟಿಯನ್ನು ಎಚ್ಚರಿಕೆಯಿಂದ ಗಮನಿಸಿದ ಅವರು, ಮೊದಲು ಆದ್ಯತೆ ನೀಡಿದ್ದು ತಮಗೆ ಪರಿಚಯವಿಲ್ಲದ ಸಾಮಾನ್ಯ ಜನರಿಗೆ. "ಸಾರ್ವಜನಿಕ ಕಚೇರಿಯು ಎಂದಿಗೂ ಶ್ರೇಣೀಕೃತ ವ್ಯವಸ್ಥೆಗೆ ಒಳಪಡಬಾರದು, ಬದಲಾಗಿ ಜನರ ಸಮಸ್ಯೆಗಳಿಗೆ ಮೊದಲು ಸ್ಪಂದಿಸಬೇಕು" ಎಂಬುದು ಅವರ ದೃಢ ನಿಲುವಾಗಿತ್ತು. ಅಧಿಕಾರಿಗಳ ಭೇಟಿಗೆ ಮುನ್ನ ಜನರ ಅಹವಾಲು ಆಲಿಸುತ್ತಿದ್ದ ಅವರ ಆ ಗುಣ ನಿಜಕ್ಕೂ ಶ್ಲಾಘನೀಯ.

ಅನಂತಕುಮಾರ್‌ಜೀ ದೇಶದಾದ್ಯಂತ 500ಕ್ಕೂ ಹೆಚ್ಚು ಜಿಲ್ಲೆಗಳಿಗೆ ಭೇಟಿ ನೀಡಿದ್ದರು. ವಿವಿಧ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುವ ಅವರ ಸಾಮರ್ಥ್ಯವು ಜನರೊಂದಿಗೆ ನೇರ ಸಂಪರ್ಕ ಸಾಧಿಸಲು ನೆರವಾಯಿತು. ಅವರ ಸ್ಮರಣಶಕ್ತಿ ಅಚ್ಚರಿಯಾಯಕವಾಗಿತ್ತು – ವರ್ಷಗಳ ಹಿಂದೆ ಭೇಟಿಯಾದ ವ್ಯಕ್ತಿಗಳ ಹೆಸರು ಮತ್ತು ಸಂದರ್ಭಗಳನ್ನು ಸಹ ಅವರು ನಿಖರವಾಗಿ ನೆನಪಿಟ್ಟುಕೊಳ್ಳುತ್ತಿದ್ದರು.

ವೈಚಾರಿಕ ಭಿನ್ನಾಭಿಪ್ರಾಯಗಳ ನಡುವೆಯೂ ಎಲ್ಲರನ್ನೂ ಒಗ್ಗೂಡಿಸುವ ಕಲೆ ಅನಂತಕುಮಾರ್ ಅವರಿಗೆ ಸಿದ್ಧಿಸಿತ್ತು. ಕೇವಲ ಮಾತುಗಳಿಗಿಂತ ಕಾರ್ಯದ ಮೂಲಕವೇ ಉತ್ತರಿಸುತ್ತಿದ್ದ ಅವರು, ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿಹಿಡಿದ ಶ್ರೇಷ್ಠ ಚೇತನ. ಅವರಲ್ಲಿದ್ದ ಅಪಾರ ಕಾರ್ಯಸಾಧನೆಯ ಉತ್ಕಟೇಚ್ಛೆ ಮತ್ತು ಸಾಂಸ್ಥಿಕ ಶಿಸ್ತು ನಮಗೆ ಸದಾ ಮಾದರಿ. ವೈಯಕ್ತಿಕವಾಗಿ ನಾನು ಒಬ್ಬ ಮಾರ್ಗದರ್ಶಕನನ್ನು ಹಾಗೂ ದೇಶವು ಒಬ್ಬ ದೂರದೃಷ್ಟಿಯುಳ್ಳ ರಾಷ್ಟ್ರಭಕ್ತನನ್ನು ಕಳೆದುಕೊಂಡಿರಬಹುದು; ಆದರೆ ಅವರ ರಾಷ್ಟ್ರಸೇವೆಯ ಆದರ್ಶಗಳು ಮತ್ತು ಸಮಗ್ರ ಕಾರ್ಯಾನುಶೀಲತೆಯು ಮುಂದಿನ ಪೀಳಿಗೆಗೆ ಸದಾ ಪ್ರೇರಣೆಯಾಗಿರುತ್ತವೆ.

**-ಶ್ರೀ ಅನಿಲಕುಮಾರ ಬಳ್ಳಾರಿ**

**ಮಾಜಿ ಸಹ ನಿರ್ದೇಶಕರು, ಇಂಡೋ-ಜರ್ಮನ್ ಇಂಧನ ವೇದಿಕೆ (IGEF) ಮತ್ತು ಮಾಜಿ ವಿಶೇಷ ಕರ್ತವ್ಯಾಧಿಕಾರಿ, ನವದೆಹಲಿ**

# ಮಹಾರಾಣಿ ರುದ್ರಮದೇವಿ

ವ್ಯಕ್ತಿ ವಿಶೇಷ ಮಾಲಿಕೆ

ಭಾರತೀಯ ಇತಿಹಾಸದ ಪುಟಗಳನ್ನು ತಿರುವಿದಾಗ ಅಸಂಖ್ಯಾತ ಸಾಮ್ರಾಜ್ಯಗಳ ಉದಯ ಮತ್ತು ಅಸ್ತಗಳ ಚಿತ್ರಣವಷ್ಟೇ ಅಲ್ಲದೆ, ಅವುಗಳನ್ನು ಆಳಿದ ರಾಜ-ಮಹಾರಾಜರ ಶೌರ್ಯಗಾಥೆಗಳು ನಮ್ಮ ಕಣ್ಮುಂದೆ ಬರುತ್ತವೆ. ಆದರೆ, ಅಂದಿನ ಪುರುಷಪ್ರಧಾನ ಸಮಾಜದ ಕಟ್ಟುಪಾಡುಗಳನ್ನು ಮುರಿದು, ವಿಶಾಲ ಸಾಮ್ರಾಜ್ಯವೊಂದನ್ನು ದಕ್ಷತೆಯಿಂದ ಮುನ್ನಡೆಸಿ, ರಣರಂಗದಲ್ಲಿಯೇ ವೀರಮರಣವನ್ನಪ್ಪಿದ ಧೀಮಂತ ಮಹಿಳೆಯರ ಉದಾಹರಣೆಗಳು ತೀರಾ ವಿರಳ. ಅಂತಹ ಅಪರೂಪದ ಹಾಗೂ ಸ್ಫೂರ್ತಿದಾಯಕ ಇತಿಹಾಸಕ್ಕೆ ಸಾಕ್ಷಿಯಾದವರೇ ಕಾಕತೀಯ ವಂಶದ ಹೆಮ್ಮೆಯ ಮಹಾರಾಣಿ ರುದ್ರಮದೇವಿ. ಕ್ರಿ.ಶ. 13ನೇ ಶತಮಾನದಲ್ಲಿ, ಇಂದಿನ ತೆಲಂಗಾಣ ಮತ್ತು ಆಂಧ್ರಪ್ರದೇಶದ ಬಹುಭಾಗವನ್ನು ಒಳಗೊಂಡಿದ್ದ ಪ್ರಬಲ ಕಾಕತೀಯ ಸಾಮ್ರಾಜ್ಯವನ್ನು ಸತತ ಮೂರು ದಶಕಗಳ (ಕ್ರಿ.ಶ. 1262 - 1289) ಕಾಲ ಆಳಿದ ಈ ಅಪ್ರತಿಮ ಚತುರೆ, ತನ್ನ ಅದ್ಭುತ ಯುದ್ಧಕೌಶಲ, ಮುತ್ಸದ್ದಿತನ ಹಾಗೂ ಜನಪರ ಆಡಳಿತದ ಮೂಲಕ ಚರಿತ್ರೆಯಲ್ಲಿ ಅಜರಾಮರ ಸ್ಥಾನವನ್ನು ಪಡೆದುಕೊಂಡಿದ್ದಾಳೆ.

**ರಾಜಕುಮಾರನಾಗಿ ಬೆಳೆದ ರಾಜಕುಮಾರಿ:** ರುದ್ರಮದೇವಿಯ ರೋಚಕ ಬಾಲ್ಯ: ಕಾಕತೀಯ ಸಾಮ್ರಾಜ್ಯದ ಶ್ರೇಷ್ಠ ದೊರೆ ಗಣಪತಿದೇವನಿಗೆ ಗಂಡು ಸಂತಾನವಿರಲಿಲ್ಲ. ತನ್ನ ಸಾಮ್ರಾಜ್ಯದ ಭವಿಷ್ಯವೇನಾಗುವುದೋ ಎಂಬ ಆತಂಕ ಅವನನ್ನು ಸದಾ ಕಾಡುತ್ತಿತ್ತು. ಹೆಣ್ಣುಮಕ್ಕಳು ಕೇವಲ ಅಂತಃಪುರಕ್ಕೆ ಸೀಮಿತವಾಗಿದ್ದ, ಮಹಿಳೆಯೊಬ್ಬಳು ಸಿಂಹಾಸನವೇರುವುದು ಕಲ್ಪನೆಗೂ ನಿಲುಕದ ಆ ಕಾಲಘಟ್ಟದಲ್ಲಿ, ದೂರದೃಷ್ಟಿಯುಳ್ಳ ಗಣಪತಿದೇವನು ದಿಟ್ಟ ನಿರ್ಧಾರವೊಂದನ್ನು ಕೈಗೊಂಡನು. ತನ್ನ ಮಗಳಾದ ರುದ್ರಮದೇವಿಯನ್ನೇ ಸಾಮ್ರಾಜ್ಯದ ಉತ್ತರಾಧಿಕಾರಿಯನ್ನಾಗಿ ಮಾಡಲು ನಿಶ್ಚಯಿಸಿದನು.

ಇದಕ್ಕಾಗಿ ಅಂದಿನ ಕಠಿಣ ಸಾಮಾಜಿಕ ಹಾಗೂ ಧಾರ್ಮಿಕ ಸಂಪ್ರದಾಯಗಳನ್ನು ಬದಿಗೊತ್ತಿದ ಆತ, ಪ್ರಾಚೀನ **'ಪುತ್ರಿಕಾ ವಿಧಿ'**ಯ ಮೊರೆಹೋದನು. ಈ ವಿಶಿಷ್ಟ ಪದ್ಧತಿಯ ಮೂಲಕ ರುದ್ರಮದೇವಿಯನ್ನು ನಾಡಿನ ಅಧಿಕೃತ 'ಪುತ್ರ'ನೆಂದು ಸಾರಿ, ಆಕೆಗೆ 'ರುದ್ರದೇವ ಮಹಾರಾಜ' ಎಂದು ನಾಮಕರಣ ಮಾಡಿದನು. ಬಾಲ್ಯದಲ್ಲಿ ರುದ್ರಮದೇವಿಗೆ ಕೇವಲ ಅಂತಃಪುರದ ಶಿಕ್ಷಣ ಸೀಮಿತವಾಗಿರಲಿಲ್ಲ; ಬದಲಾಗಿ, ಭವಿಷ್ಯದ ಮಹಾರಾಜನೊಬ್ಬನಿಗೆ ನೀಡುವಂತಹ ಅತ್ಯಂತ ಕಠಿಣ ಸಮರಕಲೆಗಳ ತರಬೇತಿಯನ್ನು ನೀಡಲಾಯಿತು. ಕತ್ತಿವರಸೆ, ಈಟಿವರಸೆ, ಬಿಲ್ಲುವಿದ್ಯೆ ಹಾಗೂ ಕುದುರೆ-ಆನೆ ಸವಾರಿಗಳಲ್ಲಿ ಪಳಗಿದ ಆಕೆಗೆ, ಬೌದ್ಧಿಕವಾಗಿಯೂ ಸಾಮ್ರಾಜ್ಯವನ್ನು ಮುನ್ನಡೆಸಲು ರಾಜನೀತಿ, ಅರ್ಥಶಾಸ್ತ್ರ ಮತ್ತು ಧರ್ಮಶಾಸ್ತ್ರಗಳ ಜ್ಞಾನವನ್ನು ಧಾರೆ ಎರೆಯಲಾಯಿತು.

**ಸಿಂಹಾಸನಾರೋಹಣ ಮತ್ತು ಒಳಸಂಚಿನ ಸುಳಿಯಲ್ಲಿ ಸಾಮ್ರಾಜ್ಯ:** ಕ್ರಿ.ಶ. 1262ರಲ್ಲಿ ಗಣಪತಿದೇವನ ನಿಧನಾನಂತರ, ರುದ್ರಮದೇವಿ 'ರುದ್ರದೇವ ಮಹಾರಾಜ'ನಾಗಿ ಕಾಕತೀಯ ಸಾಮ್ರಾಜ್ಯದ ಸಿಂಹಾಸನವನ್ನೇರಿದಳು. ಆದರೆ, ಈ ಪಟ್ಟಾಭಿಷೇಕ ಸುಗಮವಾಗಿರಲಿಲ್ಲ. ಕಡು ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣೊಬ್ಬಳು ತಮ್ಮನ್ನು ಆಳುವುದನ್ನು ಸಹಿಸದ ಸಾಮಂತರು ಹಾಗೂ ಆಕೆಯ ಸ್ವಂತ ರಕ್ತಸಂಬಂಧಿಗಳೇ (ಮಲಸಹೋದರರು) ಬಂಡಾವುಟ ಹಾರಿಸಿದರು. ಹೊರಗಿನ ಶತ್ರುಗಳಿಗಿಂತ, ತನ್ನವರೇ ಹೆಣೆದ ದ್ರೋಹ ಮತ್ತು ಪಿತೂರಿಗಳ ಜಾಲವೇ ಆಕೆಗೆ ಎದುರಾದ ಅತಿದೊಡ್ಡ ಸವಾಲಾಗಿತ್ತು.

**ರಣರಂಗದ ರುದ್ರಕಾಳಿ: ಪರಕೀಯರ ದಮನ ಮತ್ತು ಸಾಮ್ರಾಜ್ಯ ರಕ್ಷಣೆ** ರುದ್ರಮದೇವಿಯ ಆಡಳಿತದ ಅವಧಿ ನಿರಂತರ ಯುದ್ಧಗಳ ಅಗ್ನಿಕುಂಡವಾಗಿತ್ತು. ಆಂತರಿಕ ಬಂಡಾಯಗಳನ್ನು ಹತ್ತಿಕ್ಕುವಷ್ಟರಲ್ಲಿ, ನೆರೆಯ ದೇವಗಿರಿಯ ಯಾದವರು ಮತ್ತು ದಕ್ಷಿಣದ ಪಾಂಡ್ಯರು ಕಾಕತೀಯ ಸಾಮ್ರಾಜ್ಯದ ಸಂಪತ್ತಿನ ಮೇಲೆ ಹದ್ದಿನ ಕಣ್ಣಿಟ್ಟರು. ದೇವಗಿರಿಯ ಅರಸ ಮಹಾದೇವನು, 'ಓರ್ವ ಮಹಿಳೆಯ ಆಳ್ವಿಕೆ ತಾನೇ' ಎಂದು ಹಗುರವಾಗಿ ಪರಿಗಣಿಸಿ ಆಕ್ರಮಣ ಮಾಡಿದನು. ಆದರೆ, ಕ್ರಿ.ಶ. 1263ರ ಸುಮಾರಿಗೆ ನಡೆದ ಐತಿಹಾಸಿಕ ಕದನದಲ್ಲಿ ಶತ್ರುಗಳೆದುರು ಸಾಕ್ಷಾತ್ ರಣಚಂಡಿಯಂತೆ ಮೆರೆದ ರುದ್ರಮದೇವಿ, ಮಹಾದೇವನ ಸೇನೆಯನ್ನು ಧೂಳೀಪಟ ಮಾಡಿ ಹೀನಾಯ ಸೋಲುಣಿಸಿದಳು. ಯುದ್ಧದ ಪರಿಹಾರವಾಗಿ ಅಪಾರ ಪ್ರಮಾಣದ ಕಪ್ಪಕಾಣಿಕೆಯನ್ನು ವಸೂಲಿ ಮಾಡಿದ ಈ ಅಭೂತಪೂರ್ವ ವಿಜಯವು ಆಕೆಯ ಕೀರ್ತಿಪತಾಕೆಯನ್ನು ದಕ್ಷಿಣ ಭಾರತದಾದ್ಯಂತ ರಾರಾಜಿಸುವಂತೆ ಮಾಡಿತು.



ಶತ್ರುಗಳ ದಾಳಿಯನ್ನು ಶಾಶ್ವತವಾಗಿ ತಡೆಯಲು ಆಕೆ ತನ್ನ ಸೇನಾ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳನ್ನು ತಂದಳು. ಪ್ರಾದೇಶಿಕ ನಾಯಕರಿಗೆ ಸೇನಾ ನಿರ್ವಹಣೆಯ ಜವಾಬ್ದಾರಿಯನ್ನು ಹಂಚುವ 'ನಾಯಂಕರ ಪದ್ಧತಿ'ಯನ್ನು (Nayankara System) ಬಲಪಡಿಸಿದಳು. ಇದು ಎಷ್ಟೊಂದು ಪರಿಣಾಮಕಾರಿಯಾಗಿತ್ತೆಂದರೆ, ಮುಂದಿನ ದಿನಗಳಲ್ಲಿ ವಿಜಯನಗರ ಸಾಮ್ರಾಜ್ಯವೂ ಇದೇ ಮಾದರಿಯನ್ನು ಅಳವಡಿಸಿಕೊಂಡು ಮೆರೆಯಿತು.

**ಕೃಷಿ, ನೀರಾವರಿ ಮತ್ತು ಆಡಳಿತಾತ್ಮಕ ಕ್ರಾಂತಿ:** ರುದ್ರಮದೇವಿ ಕೇವಲ ರಣರಂಗದ ಸಿಡಿಲಮರಿಯಾಗಿರಲಿಲ್ಲ; ಆಕೆ ಅಪಾರ ಕರುಣೆಯುಳ್ಳ, ದೂರದೃಷ್ಟಿಯ ಜನಾನುರಾಗಿ ಆಡಳಿತಗಾರ್ತಿಯಾಗಿದ್ದಳು. ಮಳೆಯನ್ನೇ ನೆಚ್ಚಿಕೊಂಡಿದ್ದ ರೈತರ ನೆರವಿಗೆ ಧಾವಿಸಿದ ಆಕೆ, ರಾಜ್ಯದಾದ್ಯಂತ ನೂರಾರು ಕೆರೆ-ಕಟ್ಟೆಗಳನ್ನು (Tank irrigation) ನಿರ್ಮಿಸಿ ಜಲಕ್ರಾಂತಿಯನ್ನೇ ಸೃಷ್ಟಿಸಿದಳು. ಆಕೆಯ ಆಳ್ವಿಕೆಯಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರಗಳು ಉಚ್ಛ್ರಾಯ ಸ್ಥಿತಿಯನ್ನು ತಲುಪಿದ್ದವು. ಜಗತ್ಪ್ರಸಿದ್ಧ ವಿದೇಶಿ ಪ್ರವಾಸಿ ಮಾರ್ಕೋ ಪೋಲೋ ತನ್ನ ಭಾರತದ ಪ್ರವಾಸದ ವೇಳೆ ಕಾಕತೀಯರ ರೇವುಪಟ್ಟಣಕ್ಕೆ ಭೇಟಿ ನೀಡಿ, ರುದ್ರಮದೇವಿಯ ಅತ್ಯುತ್ತಮ ಆಡಳಿತ ವೈಖರಿ ಹಾಗೂ ಪ್ರಜೆಗಳ ಸುಭಿಕ್ಷತೆಯನ್ನು ತನ್ನ ಪ್ರವಾಸ ಕಥನಗಳಲ್ಲಿ ಮುಕ್ತಕಂಠದಿಂದ ಕೊಂಡಾಡಿದ್ದಾನೆ.

**ವೀರಮರಣ ಹಾಗೂ ಎಂದೆಂದಿಗೂ ಮರೆಯದ ಸ್ಫೂರ್ತಿ**

ರುದ್ರಮದೇವಿಯ ಇಡೀ ಜೀವನವೇ ಒಂದು ನಿರಂತರ ಹೋರಾಟ. ಇಳಿ ವಯಸ್ಸಿನಲ್ಲೂ ಶತ್ರುಗಳೆದುರು ಮಂಡಿಯೂರದ ಆಕೆ, ಕ್ರಿ.ಶ. 1289ರಲ್ಲಿ ತನ್ನ ಸಾಮಂತನಾಗಿದ್ದ ಅಂಬದೇವನ ಬಂಡಾಯವನ್ನು ಹತ್ತಿಕ್ಕಲು ಖುದ್ದಾಗಿ ರಣರಂಗಕ್ಕಿಳಿದಳು. ಚಂದುಪಟ್ಲದ ಕಾಳಗದಲ್ಲಿ ಹೋರಾಡುತ್ತಲೇ ಆಕೆ ವೀರಸ್ವರ್ಗ ಸೇರಿದಳು. ರುದ್ರಮದೇವಿ ಎಂಬ ಹೆಸರು ಕೇವಲ ಕಾಕತೀಯರ ಇತಿಹಾಸವಲ್ಲ, ಅದು ಸ್ತ್ರೀ ಶಕ್ತಿಯ ಅಪ್ರತಿಮ ಸಂಕೇತ. ಲಿಂಗಭೇದದ ಎಲ್ಲ ಅಡೆತಡೆಗಳನ್ನು ಮೀರಿ ಬೆಳೆದು, ನಾಡನ್ನು ಸಮರ್ಥವಾಗಿ ಮುನ್ನಡೆಸಿದ ಆಕೆಯ ಬದುಕು ಇಂದಿನ ಹಾಗೂ ಮುಂದಿನ ತಲೆಮಾರುಗಳಿಗೆ ಅತ್ಯುತ್ತಮ ಮಾದರಿ. ಆಕೆ ಕೇವಲ ಒಂದು ಪ್ರಾಂತ್ಯದ ಮಹಾರಾಣಿಯಲ್ಲ, ಬದಲಾಗಿ ಇಡೀ ಭಾರತ ದೇಶವೇ ಹೆಮ್ಮೆಪಡುವಂತಹ ಅಪ್ರತಿಮ ವೀರಮಾತೆ. ಚರಿತ್ರೆಯ ಪುಟಗಳಲ್ಲಿ ಆಕೆಯ ಕೀರ್ತಿ ಶಾಶ್ವತವಾಗಿ ಅಜರಾಮರ.

## ಅದಮ್ಯ ಚೇತನದಿಂದ ‘ಇಕೋ ಅಂಗಡಿ’ ಆರಂಭ



ಪರಿಸರ ಸಂರಕ್ಷಣೆ ಮತ್ತು ಶೂನ್ಯ ತ್ಯಾಜ್ಯದ ಪರಿಕಲ್ಪನೆಯನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ‘ಅದಮ್ಯ ಚೇತನ’ ಸಂಸ್ಥೆಯು ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದೆ. ಸಂಸ್ಥೆಯ ವತಿಯಿಂದ ನೂತನವಾಗಿ ಆರಂಭಿಸಲಾದ ‘ಇಕೋ ಅಂಗಡಿ’ (Eco Angadi ) ಮಾರ್ಚ್ 14 ರಂದು ಗಣ್ಯರ ಸಮ್ಮುಖದಲ್ಲಿ ಅದ್ದೂರಿಯಾಗಿ ಉದ್ಘಾಟನೆಗೊಂಡಿತು. ಪರಿಸರ ಸ್ನೇಹಿ ಮತ್ತು ಸುಸ್ಥಿರ ಜೀವನಶೈಲಿಯನ್ನು ಉತ್ತೇಜಿಸುವ ಸದಾಶಯದೊಂದಿಗೆ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಈ ವಿಶಿಷ್ಟ ಮಾರುಕಟ್ಟೆಗೆ ಚಾಲನೆ ನೀಡಿದರು. ವಿಷಮುಕ್ತ ಆಹಾರ ಪದ್ಧತಿಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಆರಂಭವಾಗಿರುವ ಈ ಅಂಗಡಿಯಲ್ಲಿ ಕೆಂಪಕ್ಕಿ, ಸಿರಿಧಾನ್ಯಗಳು, ಜವೆಗೋಧಿ ಹಿಟ್ಟು, ಬೇಳೆಕಾಳುಗಳು ಹಾಗೂ ಬೆಲ್ಲ ಸೇರಿದಂತೆ ದೈನಂದಿನ ಬಳಕೆಯ ವಿವಿಧ ಸಾಂಬಾರ ಪದಾರ್ಥಗಳು ಲಭ್ಯವಿವೆ.

ಬ್ರಿಕ್ಸ್, ಅಕ್ಷಯಕಲ್ಪ, ಮತ್ತು ಓಟಿಜಿ ಸಂಸ್ಥೆಗಳ ಸಹಯೋಗದೊಂದಿಗೆ ನಡೆಯುತ್ತಿರುವ ಈ ಮಾರುಕಟ್ಟೆಯಲ್ಲಿ ತಾಜಾ ಸಾವಯವ ತರಕಾರಿಗಳು, ಹಣ್ಣುಗಳು, ನೈಸರ್ಗಿಕ ಸಾಬೂನುಗಳು ಮತ್ತು ಎರೆಹುಳು ಗೊಬ್ಬರಗಳನ್ನು ಒಂದೇ ಸೂರಿನಡಿ ಒದಗಿಸಲಾಗುತ್ತಿದೆ. ಉದ್ಘಾಟನಾ ದಿನದಂದು ವಿಶೇಷವಾಗಿ ಉತ್ತರ ಕರ್ನಾಟಕದ ‘ಪುಟ್ಟ-ಕೆಂಪು ಬದನೆ’ ಹಾಗೂ ಸಾವಯವ ದ್ರಾಕ್ಷಿಗೆ ಗ್ರಾಹಕರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಯಿತು. ಕೇವಲ ವ್ಯಾಪಾರಕ್ಕಷ್ಟೇ ಸೀಮಿತವಾಗದೆ, ಈ ಇಕೋ ಅಂಗಡಿಯು ಒಂದು ಜ್ಞಾನ ಕೇಂದ್ರವಾಗಿಯೂ ಗಮನ ಸೆಳೆಯುತ್ತಿದೆ. ಉದ್ಘಾಟನೆಯ ಅಂಗವಾಗಿ ಬ್ರಿಕ್ಸ್ ಸಂಸ್ಥೆಯ ಮುಖ್ಯಸ್ಥ ಶ್ರೀ ರಾಜೇಂದ್ರ ಹೆಗಡೆ ಅವರ ನೇತೃತ್ವದಲ್ಲಿ ‘ಅಡುಗೆ ಮನೆಯ ತ್ಯಾಜ್ಯದಿಂದ ಮನೆಯಲ್ಲೇ ಕಾಂಪೋಸ್ಟ್ ತಯಾರಿಕೆ’ ಕುರಿತು ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ನೂರಾರು ಗೃಹಿಣಿಯರು ಉತ್ಸಾಹದಿಂದ ಭಾಗವಹಿಸಿ ಪರಿಸರ ಸಂರಕ್ಷಣೆಯ ಪ್ರಾಯೋಗಿಕ ಪಾಠಗಳನ್ನು ಕಲಿತರು.

ಆರೋಗ್ಯಕರ ಆಹಾರ ಮತ್ತು ಪರಿಸರ ರಕ್ಷಣೆಯ ಹಿತದೃಷ್ಟಿಯಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿ ಶನಿವಾರ ನಡೆಯುವ ಈ ಇಕೋ ಅಂಗಡಿಯ ಪ್ರಯೋಜನ ಪಡೆದುಕೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ, ಶ್ರೀಚೇತನ ಸಭೆ, 36 ಕಡೆ ಪ್ಲೇಟ್ ಬ್ಯಾಂಕ್, 10 ಕೇಂದ್ರಗಳಿಂದ ಉಚಿತ ಭೋಜನ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

## ತಿಂಗಳ ವರದಿ
### ( ಫೆಬ್ರವರಿ -ಮಾರ್ಚ್ ) 2026)

**ಹಸಿರು ಭಾನುವಾರ :** ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 530 ರಿಂದ 533ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು. 530, 531, 532, ಮತ್ತು 533 ನೇ ಹಸಿರು ಭಾನುವಾರಗಳನ್ನು ಕ್ರಮವಾಗಿ, ಕಗ್ಗಲಿಪುರ ಉತ್ತರಿ ಶಂಕರ ಮಠದ ಆವರಣ, ಬಸವನಗುಡಿಯ ಬಿ ಪಿ ವಾಡಿಯಾ ರಸ್ತೆಯ ಅನಂತವನದ ಆವರಣ, ಕಗ್ಗಲಿಪುರ ಉತ್ತರಿ ಶಂಕರ ಮಠದ ಆವರಣ, ರಾಮೋಹಳ್ಳಿಯ ಮುಕ್ತಿನಾಗ ದೇವಸ್ಥಾನದ ಆವರಣದಲ್ಲಿ ನಡೆಯಿತು. ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಮೊದಲಾದವರು ಭಾಗವಹಿಸಿದ್ದರು.

## ಅದಮ್ಯ ಚೇತನ: ಸೇವಾ ಚಟುವಟಿಕೆಗಳ ಸಭೆ ಮತ್ತು ಗೌರವ ಸಮರ್ಪಣೆ



ಮಾರ್ಚ್ 11ರಂದು ಅದಮ್ಯ ಚೇತನ ಸಂಸ್ಥೆಯ ಸಭಾಂಗಣದಲ್ಲಿ ಕಾರ್ಯಕರ್ತರ ವಿಶೇಷ ಸಭೆಯು ಅತ್ಯಂತ ಯಶಸ್ವಿಯಾಗಿ ಜರುಗಿತು. ಸಂಸ್ಥೆಯ ಮುಂದಿನ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಲು ಆಯೋಜಿಸಲಾಗಿದ್ದ ಈ ಸಭೆಯಲ್ಲಿ ಹಿರಿಯ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ, ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಹಾಗೂ ಅನಂತಕುಮಾರ್ ಪ್ರತಿಷ್ಠಾನದ ಕಾರ್ಯದರ್ಶಿಯಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಜನ್ಮದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಗಣ್ಯರು ಹಾಗೂ ಕಾರ್ಯಕರ್ತರು, ಗ್ರಾಮೀಣ ಮಹಿಳಾ ನೇತೃತ್ವ ವಿಕಸನ ಶಿಬಿರ, ಹಸಿರು ಭಾನುವಾರ , ಸಸ್ಯಾಹ್ರಹ, ಪ್ಲೇಟ್ ಬ್ಯಾಂಕ್ ಮತ್ತು ಶೂನ್ಯ ತ್ಯಾಜ್ಯ ಅಡುಗೆ ಮನೆಯಂತಹ ಸಮಾಜಮುಖಿ ಯೋಜನೆಗಳ ಮೂಲಕ ಪರಿಸರ ಸಂರಕ್ಷಣೆ ಹಾಗೂ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುತ್ತಿರುವ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ಸೇವೆಯನ್ನು ಸ್ಮರಿಸಿದರು. ಜೈವಿಕ ಇಂಧನ ಬಳಸಿ ಅಡುಗೆ ಮಾಡುವ ನವೀನ ಪರಿಕಲ್ಪನೆ ಹಾಗೂ ನಿತ್ಯ ಅನ್ನದಾನದಂತಹ ಕಾರ್ಯಕ್ರಮಗಳ ಮೂಲಕ ಅವರು ಸಮಾಜಕ್ಕೆ ಮಾದರಿಯಾಗಿದ್ದಾರೆ. ಅವರ ಈ ಸೇವಾಪರಂಪರೆ ನಿರಂತರವಾಗಿ ಮುಂದುವರಿಯಲಿ, ದೇವರು ಅವರಿಗೆ ಹೆಚ್ಚಿನ ಶಕ್ತಿ, ಆಯಸ್ಸು ಮತ್ತು ಆರೋಗ್ಯವನ್ನು ಕರುಣಿಸಲಿ ಎಂದು ಕಾರ್ಯಕರ್ತರು ಈ ಸಂದರ್ಭದಲ್ಲಿ ಹಾರೈಸಿದರು.


ಅನಂತಪಥ

Published by: Tejaswini Ananthkumar
Inputs : | T S Gopal | Poornaprajna| Trivikram Joshi
ACknowldegements: Nayana S
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಜಯನಗರ ವಿಧಾನಸಭಾ ಕ್ಷೇತ್ರದ ವತಿಯಿಂದ ಆಯೋಜಿಸಲಾಗಿದ್ದ ಪ್ರಶಿಕ್ಷಣ ವರ್ಗ ಕಾರ್ಯಾಗಾರದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.



ದೆಹಲಿ ಮುಖ್ಯಮಂತ್ರಿಗಳಾದ ಶ್ರೀಮತಿ ರೇಖಾ ಗುಪ್ತಾ ಮತ್ತು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ರಾಷ್ಟ್ರೀಯ ಮಹಿಳಾ ಚಿಂತಕರ ಸಮ್ಮೇಳನದಲ್ಲಿ ಭಾಗವಹಿಸಿದ ಸಂದರ್ಭ.



ಮಾರ್ಚ 14 ರಂದು ಬೆಂಗಳೂರಿನಲ್ಲಿ ನಡೆದ ICAI ಮಹಿಳಾ ಸಿಎಗಳ ಸಮ್ಮೇಳನದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಗೌರವ ಸಮರ್ಪಣೆ.



ಫೆಬ್ರವರಿ 22 ರಂದು ಹೊಸನಗರದಲ್ಲಿ ಗ್ರಾಮ ಭಾರತಿ ಟ್ರಸ್ಟ್ ಮತ್ತು ಅದಮ್ಯ ಚೇತನ ಸಂಸ್ಥೆಯ ಸಹಯೋಗದೊಂದಿಗೆ 'ಅನಂತ ಪ್ಲೇಟ್ ಬ್ಯಾಂಕ್' ಶಾಖೆಯನ್ನು ಉದ್ಘಾಟಿಸಲಾಯಿತು.



ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ 'ಧರ್ಮ ಶಿರೋಮಣಿ' ಪ್ರಶಸ್ತಿ: ತೆಲಂಗಾಣದ 'ವನಿತಾ ಶಕ್ತಿ ಇಂಟರ್ನ್ಯಾಷನಲ್' ಸಂಸ್ಥೆಯು ಅವರ ಅನುಪಮ ಸಮಾಜಸೇವೆಯನ್ನು ಗೌರವಿಸಿ ಈ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದೆ.




ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ, ಗ್ಯಾಸ್ ಟರ್ಬೈನ್ ಸಂಶೋಧನಾ ಸಂಸ್ಥೆ (GTRE - DRDO) ವತಿಯಿಂದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಸನ್ಮಾನ ನೆರವೇರಿಸಲಾಯಿತು.



ಅದಮ್ಯ ಚೇತನ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ '533ನೇ ಹಸಿರು ಭಾನುವಾರ' ಕಾರ್ಯಕ್ರಮವು ಮಾರ್ಚ್ 15 ರಂದು ಬೆಂಗಳೂರಿನ ರಾಮೋಹಳ್ಳಿಯ ಶ್ರೀ ಮುಕ್ತಿನಾಗ ದೇವಸ್ಥಾನದ ಆವರಣದಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಿತು




ಬೆಂಗಳೂರಿನ ಅನ್ನಪೂರ್ಣ ಅಡುಗೆ ಮನೆಯ ಆವರಣದಲ್ಲಿ ಅದಮ್ಯ ಚೇತನ ಸಂಸ್ಥೆಯಿಂದ ಅನ್ನದಾನ ಸೇವೆ ನಿರಂತರವಾಗಿ ನಡೆಯುತ್ತಿದೆ.